MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 266 | ಗುರುವಾರ : 07–08–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2–00

VOLUME: 04 | ISSUE: 266 | THURSDAY : 07–08–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ವಿಕ್ಟೋರಿಯಾ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿದ ಮುಖ್ಯಮಂತ್ರಿ



ಯುವ ಮಾರ್ಗ ಸುದ್ದಿ

**ರಾಯಚೂರು,ಆ.06–**ಆಗಸ್ಟ್ 6ರಂದು ರಾಯಚೂರ ಜಿಲ್ಲೆಯ ಹಟ್ಟಿಯಲ್ಲಿ ನಿಗದಿಯಾಗಿದ್ದ ಮುಖ್ಯಮಂತ್ರಿಗಳ ಪ್ರವಾಸವು ಮಳೆಯಿಂದಾಗಿ ದಿಢೀರ್ ರದ್ದಾಗಿದ್ದರಿಂದ, ಬೆಂಗಳೂರಿನಲ್ಲಿ ಬುಧವಾರ ವಿಕ್ಟೋರಿಯಾ ಆಸ್ಪತ್ರೆಗೆ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಅನಿರೀಕ್ಷಿತ ಭೇಟಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರೊಂದಿಗೆ ವಿಕ್ಟೋರಿಯಾ ಆಸ್ಪತ್ರೆಗೆ ತೆರಳಿ ಗ್ಯಾಸ್ಟ್ರೋಎಂಟರಾಲಜಿ ಸಂಸ್ಥೆ, ಅಪಘಾತ, ಆಘಾತ ಮತ್ತು ತುರ್ತು ಆರೈಕೆ ಕೇಂದ್ರ ಮತ್ತು ವಾಣಿ ವಿಲಾಸ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು ಮತ್ತು ರೋಗಿಗಳ ಕುಶಲ ವಿಚಾರಿಸಿದರು.

ಉಭಯ ನಾಯಕರು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದ ವೇಳೆಯಲ್ಲಿ, ಆಸ್ಪತ್ರೆಯಲ್ಲಿ ಹಲವಾರು ರೋಗಿಗಳ ಜೊತೆ ಮಾತನಾಡಿದರು. ಡಾಕ್ಟರ್‌ಗಳು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಊಟ ಚೆನ್ನಾಗಿದೆ ಎಂದು ರೋಗಿಗಳು ಪ್ರತಿಕ್ರಿಯಿಸಿದರು.

ವೈದ್ಯರು ರೋಗಿಗಳನ್ನು ಸಹಾನುಭೂತಿಯಿಂದ ಕಾಣಬೇಕು. ಉಚಿತ ಚಿಕಿತ್ಸೆ ಇರುವುದರಿಂದ ಒತ್ತಡವೂ ಹೆಚ್ಚಿರುತ್ತದೆ. ವೈದ್ಯರು ಸಹನೆಯಿಂದ ಕೆಲಸ ಮಾಡಬೇಕು. ಯಾರ ಬಳಿಯೂ ಹಣ ಪಡೆಯಬಾರದು ಎಂದು ವೈದ್ಯರಿಗೆ ಮುಖ್ಯಮಂತ್ರಿಗಳು ಮತ್ತು ಸಚಿವರು ಸೂಚನೆ ನೀಡಿದರು. ಆಸ್ಪತ್ರೆಯಲ್ಲಿ ವಾಹನ ನಿಲುಗಡೆಗೆ ಹಣ ಪಡೆಯುತ್ತಿರುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮುಖ್ಯಮಂತ್ರಿಗಳು ಮತ್ತು ಸಚಿವರು ತಿಳಿಸಿದರು.(2ನೇಪುಟಕ್ಕೆ)

## ಜಲಸಮಾಧಿಯಾದವರ ಶೋಧ ಬಿರುಸು

**ಉತ್ತರಾಖಂಡ್,ಆ.06–**ಉತ್ತರ ಕಾಶಿ ಜಿಲ್ಲೆಯ ದರಾಲಿ ಪ್ರದೇಶದಲ್ಲಿ ಸಂಭವಿಸಿದ ವಿನಾಶಕಾರಿ ಮೇಘಸ್ಫೋಟದಲ್ಲಿ ನೂರಾರು ಜನರು ಸಮಾಧಿಯಾಗಿರುವ ಶಂಕೆ ವ್ಯಕ್ತವಾಗಿದೆ. ಸಾವಿನ ಸಂಖ್ಯೆ ಏರಿಕೆಯಾಗಿರುವ ಭೀತಿಯಿದೆ. 9 ಮಂದಿ ಭಾರತೀಯ ಸೇನಾ ಸಿಬ್ಬಂದಿ ಕಾಣೆಯಾಗಿದ್ದು, ಇವರೆಲ್ಲರೂ ಅವಶೇಷಗಳ ಅಡಿ ಸಿಲುಕಿದ್ದಾರೆ.

ಮೇಘಸ್ಫೋಟದಿಂದ ಮೃತರ ಸಂಖ್ಯೆ 5ಕ್ಕೆ ಏರಿಕೆಯಾಗಿದ್ದು, ಇದುವರೆಗೆ 130 ಮಂದಿಯನ್ನು ರಕ್ಷಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಮುಖ್ಯಮಂತ್ರಿ ಪುಷ್ಕರ್‌ಸಿಂಗ್‌ಧಾಮಿ ಅವರೊಂದಿಗೆ ಚರ್ಚೆ ನಡೆಸಿ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.ಕೇಂದ್ರದಿಂದ ಅಗತ್ಯವಿರುವ ನೆರವು ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ. ಈ ಮಧ್ಯೆ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ತಮ್ಮ ಆಂಧ್ರ ಪ್ರದೇಶ ಪ್ರವಾಸವನ್ನು ಮೊಟಕುಗೊಳಿಸಿ ರಾಜಧಾನಿ ಡೆಹರಾಡೂನ್‌ನಲ್ಲಿ ತುರ್ತು ಸಭೆ ಕರೆದು ಪರಿಸ್ಥಿತಿಯ ಅವಲೋಕನ ನಡೆಸಿದರು. ನಂತರ ಪ್ರವಾಹಪೀಡಿತ ಪ್ರದೇಶಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದರು.

ಘಟನಾ ಸ್ಥಳದಲ್ಲಿ ಸಿಕ್ಕಿಹಾಕಿಕೊಂಡಿರುವವರ ರಕ್ಷಣೆಗಾಗಿ 3 ಎನ್‌ಡಿಆರ್‌ಎಫ್ ತಂಡಗಳನ್ನು ರವಾನಿಸಲಾಗಿದ್ದು, ಈ ತಂಡಗಳಲ್ಲಿ ತಲಾ 35 ಮಂದಿ ಇದ್ದು, ಪರಿಹಾರ ಕಾರ್ಯಾಚರಣೆಯಲ್ಲಿ ನಿರತವಾಗಿದೆ.


ಭಾರಿ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ರಸ್ತೆಗಳ ಸಂಪರ್ಕ ಕಡಿತಗೊಂಡಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಘಟನಾ ಸ್ಥಳಕ್ಕೆ ತೆರಳಲು ಹರಸಾಹಸ ಪಡುತ್ತಿದೆ.ಮತ್ತು ನಾಪತ್ತೆಯಾಗಿರುವವರಿಗಾಗಿ ಭಾರತೀಯ ಸೇನೆ ಮತ್ತು ಪರಿಹಾರ ತಂಡಗಳು ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿದೆ.(2ನೇಪುಟಕ್ಕೆ)

## ಗೊರೆಬಾಳ ಹಲ್ಲೆ ಪ್ರಕರಣ : ಎಂಟು ಜನರ ವಿರುದ್ಧ ಎಫ್‌ಐಆರ್ ದಾಖಲು

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಆ.06–**ತಾಲೂಕಿನ ಗೊರೆಬಾಳ ಗ್ರಾಮದಲ್ಲಿ ಮಂಗಳವಾರ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಗದೀಶಗೌಡ ಮಾಲಿಪಾಟೀಲ್ ನೀಡಿದ ದೂರಿನನ್ವಯ 8 ಜನರ ವಿರುದ್ಧ ಬುಧವಾರ ಇಲ್ಲಿನ ಪೋಲಿಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

**ಫಿರ್ಯಾದಿ ಸಾರಾಂಶ**



| | | |
|---|---|---|
| 01 | ಪೊಲೀಸ್ ಠಾಣೆ | ಲಿಂಗಸುಗೂರು ಪೊಲೀಸ್ ಠಾಣೆ |
| 02 | ಅಪರಾಧ ಸಂಖ್ಯೆ & ಕಲಂ | 189/2025 ಕಲಂ: 189(2), 191(2), 115(2), 126(2), 351(2), 352 ಸಹಿತ 190 ಬಿ.ಎನ್.ಎಸ್ ಕಾಯ್ದೆ-2023 (143, 147, 323, 341, 504, 506 ರ/ವಿ 149 ಐಪಿಸಿ) |
| 03 | ಘಟನೆ ದಿನಾಂಕ & ಸಮಯ ಸ್ಥಳ ಹಾಗೂ ದೂರ, ದಿಕ್ಕು | ದಿನಾಂಕ: 05.08.2025 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಗೊರೆಬಾಳ ಗ್ರಾಮದಲ್ಲಿ ಠಾಣೆಯಿಂದ 12 ಕಿ.ಮಿ ಉತ್ತರಕ್ಕೆ |
| 04 | ವರದಿ ದಿನಾಂಕ & ಸಮಯ | ದಿನಾಂಕ: 05.08.2025 ರಂದು ರಾತ್ರಿ 7.30 ಗಂಟೆಗೆ |
| 05 | ಫಿರ್ಯಾದಿದಾರರ ಹೆಸರು & ವಿಳಾಸ | ಜಗದೀಶಗೌಡ ತಂದೆ ವೆಂಕನಗೌಡ ಮಾಲೀ ಪಾಟೀಲ್ ವಯಸ್ಸು:38 ವರ್ಷ ಜಾ: ನಾಯಕ (ಎಸ್.ಟಿ) ಸಾ: ಹಾಲಬಾವಿ |
| 06 | ಆರೋಪಿತರ ಹೆಸರು ವಿಳಾಸ | 1) ಪ್ರೇಮಗೌಡ ತಂದೆ ಹನುಮನಗೌಡ ವಯಸ್ಸು:37 ವರ್ಷ 2) ಚನ್ನಬಸವ ತಂದೆ ಮನಿಯಪ್ಪ ವಯಸ್ಸು:37 ವರ್ಷ 3) ಶಿವರಾಜ ತಂದೆ ಮನಿಯಪ್ಪ ವಯಸ್ಸು:28 ವರ್ಷ 4) ಮಂಜುನಾಥ ತಂದೆ ಹನುಮಪ್ಪ ವಯಸ್ಸು:37 ವರ್ಷ 5) ಹನುಮನಗೌಡ ತಂದೆ ಕಂಚಪ್ಪ ವಯಸ್ಸು:37 ವರ್ಷ ಸಾ: ಎಲ್ಲರೂ ಹಾಲಬಾವಿ 6) ಸಂಗಮೇಶ ತಂದೆ ಸೋಮನಾಥ ಸಾ: ಆನೆಹೊಸೂರು 7) ದೇವಪ್ಪ ತಂದೆ ಶರಣಪ್ಪ ಸಾ: ಹೀರೆ ಉಪ್ಪೇರಿ 8) ಗೋವಿಂದ ನಾಯಕ ಸಾ: ಗುರುಗುಂಟ |
| 07 | ನೊಂದ/ಗಾಯಾಳುವಿನ ಮಹಿಳೆಯ ಹೆಸರು | ಜಗದೀಶಗೌಡ ತಂದೆ ವೆಂಕನಗೌಡ ಮಾಲೀ ಪಾಟೀಲ್ ವಯಸ್ಸು:38 ವರ್ಷ ಜಾ: ನಾಯಕ (ಎಸ್.ಟಿ) ಸಾ: ಹಾಲಬಾವಿ |
| 09 | ತನಿಖಾಧಿಕಾರಿಗಳು | ಶ್ರೀ ಶರಣಪ್ಪ ಹೆಚ್.ಸಿ-66 ಲಿಂಗಸುಗೂರು ಪೊಲೀಸ್ ಠಾಣೆ |
| 10 | ಪ್ರಕರಣದ ಸಂಕ್ಷಿಪ್ತ ಸಾರಾಂಶ: ಇಂದು ದಿನಾಂಕ:05.08.2025 ರಂದು ಮ.ಧ್ಯಾ. 12.30 ಗಂಟೆ ಸುಮಾರಿಗೆ ಗೊರೆಬಾಳ ಗ್ರಾಮದ [illegible] | |

ಎಂಎಲ್‌ಸಿ ಶರಣಗೌಡ ಪಾಟೀಲ್ ಬಯ್ಯಾಪೂರ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಭೂಪನಗೌಡ ಕರಡಕಲ್, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ ಇವರುಗಳು ಗೊರೆಬಾಳ ಗ್ರಾಮದಲ್ಲಿ ಕಾರ್ಯಕ್ರಮಕ್ಕೆಂದು ಬಂದಾಗ, ಏಕಾಏಕಿ ಕಾರನ್ನು ತಡೆದು ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಲ್ಲದೇ ಹಲ್ಲೆಗೆ ಆರೇಳು ಜನರ ತಂಡ ಯತ್ನಿಸಿತು. ಅದನ್ನು ತಡೆಯಲು ಮುಂದಾದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆಂದು ದೂರುದಾರ ಜಗದೀಶ ಗೌಡ ಆರೋಪಿಸಿದ್ದಾರೆ.

**8 ಜನರ ವಿರುದ್ಧ ಎಫ್‌ಐಆರ್**

ಹಾಲಭಾವಿ ಗ್ರಾಮದ ಪ್ರೇಮಗೌಡ, ಚನ್ನಬಸವ, ಶಿವರಾಜ, ಮಂಜುನಾಥ, ಹನುಮಗೌಡ, ಸಂಗಮೇಶ ಆನೆಹೊಸೂರು, ದೇವಪ್ಪ ಹಿರೇಉಪ್ಪೇರಿ, ಗೋವಿಂದ ನಾಯಕ ಗುರುಗುಂಟ ಇವರುಗಳ ವಿರುದ್ಧ ದೂರು ದಾಖಲಾಗಿಸಿಕೊಂಡು ಪೋಲಿಸರು ತನಿಖೆ ಕೈಗೊಂಡಿದ್ದಾರೆ.

## ಸರಕಾರಿ ಶಾಲಾ ಮಕ್ಕಳಿಗೆ ಕಿಟ್ ವಿತರಣೆ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಆ.06–** ತಾಲೂಕಿನ ಮೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ರೋಹನ್‌ಕೇರ್ ಫೌಂಡೇಶನ್ ಬೆಂಗಳೂರು ಇವರ ವತಿಯಿಂದ ಶಾಲಾ ಕಿಟ್‌ಗಳನ್ನು ಬುಧವಾರ ಇಲ್ಲಿನ ಗುರುಭವನದಲ್ಲಿ ವಿತರಣೆ ಮಾಡಲಾಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ್, ಫೌಂಡೇಶನ್‌ನ ಮಂಜುನಾಥ ಅವರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಬಗಡಿತಾಂಡ, ಸರಕಾರಿ ಕಿ.ಪ್ರಾ.ಶಾಲೆ ಮಟ್ಟೂರು ತಾಂಡ, ಸ.ಕಿ.ಪ್ರಾ.ಶಾಲೆ ಸಿದ್ಧರಾಮೇಶ್ವರ ನಗರ ಅಂಕುಶದೊಡ್ಡಿ ಶಾಲೆಗಳ ಮುಖ್ಯಗುರುಗಳಿಗೆ ಅಂದಾಜು 50 ಸಾವಿರ ರೂಪಾಯಿ ಮೌಲ್ಯದ 175 ಕಿಟ್‌ಗಳನ್ನು ವಿತರಣೆ ಮಾಡಿದರು. 6 ನೋಟ್ ಪುಸ್ತಕಗಳು, ಬರವಣಿಗೆ ಸಾಮಗ್ರಿ, ನೀರಿನ ಬಾಟಲ್, ಬ್ಯಾಗ್ ಒಳಗೊಂಡಿರುವ ಕಿಟ್ ಉಚಿತವಾಗಿ ನೀಡುವ ಮೂಲಕ ಬಡ ಮಕ್ಕಳ ಶಿಕ್ಷಣಕ್ಕೆ ಸಹಕರಿಸಿದ ಫೌಂಡೇಶನ್‌ಗೆ ಅಭಿನಂದನೆ ತಿಳಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕರಾದ ಮೌನೇಶ ಜನತಾಪೂರ, ಸೂಗೂರೇಶ್ವರ, ವಿಷ್ಣುಕುವಾರ. ಸುಜಾತ, ಕಲ್ಲೇಶ, ಮೈಲಾರಪ್ಪ. ಮಲ್ಲೇಶಪ್ಪ, ಸುಭಾಷ ಸೇರಿ ಇತರರಿದ್ದರು.

## ಸ್ಕೌಟ್ ಗೈಡ್ ವಿದ್ಯಾರ್ಥಿಗಳಿಂದ ವಿಶ್ವ ಸ್ಕಾರ್ಫ್ ದಿನಾಚರಣೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಆ.06–**ವಿಶ್ವದಲ್ಲೆಡೆ ಯ ಹಳೆಯ ಮತ್ತು ಸಕ್ರಿಯ ಸ್ಕೌಟು ಗೈಡ್ಗಳನ್ನು ಒಂದು ಮಾಡುವ ಕಾರ್ಯಕ್ರಮದ ಅಂಗವಾಗಿ ವಿಶ್ವ ದಿನಾಚರಣೆಯನ್ನು ಮಾನ್ವಿ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿವಿಧ ರೀತಿಯ ಸ್ಕಾರ್ಫ್ಗಳನ್ನು ಇಡೀ ದಿವಸ ಧರಿಸುವುದರ ಜೊತೆಗೆ ನಾನಾತರದ ಸ್ಕಾರ್ಫ್ ಗಳನ್ನು ಪ್ರದರ್ಶಿಸಿದರು. ಅಲ್ಲದೆ ರಾಜ್ಯ ಮುಖ್ಯ ಆಯುಕ್ತರಾದ ಪಿಜಿಆರ್ ಸಿಂಧ್ಯಾ ಅವರ ಕರೆಯ ಮೇರೆಗೆ 15 ದಿನಗಳ ಕಾಲ ಶಾಲೆಗಳಲ್ಲಿ ಮತ್ತು ತಮ್ಮ ನೆರೆಹೊರೆ ಪ್ರದೇಶಗಳಲ್ಲಿ ದಿನಕ್ಕೊಂದು ಒಳ್ಳೆಯ ಕೆಲಸ ಮಾಡುವ ಪ್ರತಿಜ್ಞೆ ಕೈಗೊಂಡರು. ಸಂದರ್ಭದಲ್ಲಿ ಶಾಲಾ ಕಾರ್ಯದರ್ಶಿ ಸೈಯದ್ ಮುಜುತಾಬಾಕಾದ್ರಿ ಹಾಗೂ ಮುಖ್ಯ ಗುರುಗಳಾದ ನಾಗರತ್ನ ದೇಸಾಯಿ ಹಾಜರಿದ್ದರು. ಮೊದಲನೇ ದಿನದ ಒಳ್ಳೆಯ ಕೆಲಸದ ಅಂಗವಾಗಿ ಶಾಲಾ ಅವರಣದ ಸ್ವಚ್ಚತಾ ಕಾರ್ಯಕ್ರಮವನ್ನು ಕೈಗೊಂಡ. ಸ್ಥಳೀಯ ಸಂಸ್ಥೆಯ ಜಂಟಿ ಕಾರ್ಯದರ್ಶಿ ನರಸಿಂಹಮೂರ್ತಿ ದೇಸಾಯಿ ಮಕ್ಕಳಿಗೆ ಮಾರ್ಗದರ್ಶನ ನೀಡಿದರು.

## ಶಾಸಕ ಬಸನಗೌಡ ದದ್ದಲ್ ಗ್ರಾಮೀಣ ಪ್ರದೇಶದಲ್ಲಿ ಸಂಚಾರ; ಏತ ನೀರಾವರಿ ಕಾಮಗಾರಿ ವೀಕ್ಷಣೆ

ಯುವ ಮಾರ್ಗ ಸುದ್ದಿ



**ರಾಯಚೂರು,ಆ.06–** ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಬುಧವಾರ ರಾಯಚೂರ ಗ್ರಾಮೀಣ ಭಾಗದಲ್ಲಿ ಸಂಚಾರ ನಡೆಸಿದರು.

ಗುಂಜಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಶಾಸಕರು, 146 ಕೋಟಿ ರೂ ನಲ್ಲಿ ಗುಂಜಳ್ಳಿ ಬಸಪ್ಪ ಕೆರೆ ಹಾಗೂ ಸುತ್ತಲಿನ ಗ್ರಾಮಗಳ 9 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯಾದ ಏತ ನೀರಾವರಿಯ ಕಾಮಗಾರಿ ವೀಕ್ಷಣೆ ನಡೆಸಿದರು.

ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ಚಿಕ್ಕಮಂಚಾಲಿ, ಬುಳ್ಳಪೂರ ಗ್ರಾಮದ ಹತ್ತಿರ ತುಂಗಭದ್ರಾ ನದಿ ತಟಕ್ಕೆ ಭೇಟಿ ನೀಡಿದ ಶಾಸಕರು, ಏತ ನೀರಾವರಿ ಕಾಮಗಾರಿಯ ಸಮಗ್ರ ವೀಕ್ಷಣೆ ನಡೆಸಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.


ಈ ವೇಳೆ ಶಾಸಕರು ಮಾತನಾಡಿ, ಈಗಾಗಲೇ ಕೃಷ್ಣ ನದಿಯಿಂದ ಬಂಗಾರಪ್ಪ ಕೆರೆ ತುಂಬಿಸುವ ಯೋಜನೆಯಿಂದಾಗಿ ರೈತರ ಹೊಲಗಳಿಗೆ, ಕೆರೆಗಳಿಗೆ ಹಾಗೂ ಕುಡಿವ ನೀರಿಗೆ ಅನುಕೂಲ ಮಾಡಲಾಗಿದೆ. ಅದೆ ರೀತಿಯಾಗಿ ತುಂಗಭದ್ರಾ ನದಿಯಿಂದ ಗುಂಜಳ್ಳಿ ಬಸಪ್ಪ ಕೆರೆ ಹಾಗೂ ಸುತ್ತಲಿನ 9 ಗ್ರಾಮಗಳಾದ ಗುಂಜಳ್ಳಿ ಕೆರೆ, ಗೋಡಿಹಾಳ್ ಕೆರೆ, ಯರಗೇರಾ1 ಕೆರೆ, ಯರಗೇರಾ2 ಕೆರೆ, ಕೆರೆಬೂದುರ ಕೆರೆ, ಕಮಲಾಪೂರ ಕೆರೆ, ಮಂಜರ್ಲಾ, ಗಧಾರ ಕೆರೆ, ಮಿಡಗಲದಿನ್ನಿ ಕೆರೆಗಳನ್ನು ತುಂಬಿಸುವ ಈ ಯೋಜನೆ ಯಶ ಕಂಡಲ್ಲಿ ಅಂತರ್ಜಲ ಮಟ್ಟ ಉತ್ತಮವಾಗಿ ಕುಡಿಯುವ ನೀರು ಹಾಗೂ ರೈತರ ಹೊಲಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ರಾಯಚೂರ ಗ್ರಾಮೀಣ ಕ್ಷೇತ್ರದ ಎಲ್ಲ ಪ್ರದೇಶವನ್ನು ಸಂಪೂರ್ಣ ನೀರಾವರಿ ಮಾಡುವುದು ತಮ್ಮ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದ ಶಾಸಕರು, ಈ ನಿಟ್ಟಿನಲ್ಲಿ ಈ ಭಾಗದಲ್ಲಿ ಬೇರೆ ಬೇರೆ ನೀರಾವರಿ ಯೋಜನೆಗಳನ್ನು ಅನುಷ್ಠಾನ ಮಾಡಲು ನಾನಾ ಯೋಜನೆಗಳಿಗೆ ಡಿಪಿಆರ್ ಗೆ ಕಳುಹಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗಿಲ್ಲೇಸೂಗುರ ಬ್ಲಾಕ್ ಅಧ್ಯಕ್ಷರು, ಚಿಕ್ಕಮಂಚಾಲಿ, ಬುಳ್ಳಪೂರ, ಗುಂಜಳ್ಳಿ ಸೇರಿದಂತೆ ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ಗ್ರಾಮಸ್ಥರು, ನಾಮನಿರ್ದೇಶಿತ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

## ಪೌಷ್ಟಿಕ ಆಹಾರ ಸೇವನೆ ಉತ್ತಮ ಆರೋಗ್ಯಕ್ಕೆ ದಾರಿ :ನ್ಯಾ.ಉಂಡಿ ಮಂಜುಳಾ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಆ.6–** ಪ್ರತಿನಿತ್ಯ ವ್ಯಾಯಾಮ ಮಾಡುವುದು,ಮಿತವಾಗಿ ನಡಿಗೆ, ಸಾಕಷ್ಟು ನಿದ್ರೆ ಮಾಡುವುದು,ಒತ್ತಡದ ಜೀವನವನ್ನು ಕಡಿಮೆ ಮಾಡಿಕೊಳ್ಳುವದು,ಪೌಷ್ಟಿಕಾಂಶಯುಕ್ತ ಆಹಾರಗಳನ್ನು ಸೇವಿಸುವದು ಇವೆಲ್ಲವುಗಳು ರೋಗ ನಿರೋದಕ ಶಕ್ತಿ ಹೆಚ್ಚಿಸಿ ರೋಗಗಳನ್ನು ದೂರವಿಡಲು ಸಹಾಯ ಮಾಡುತ್ತದೆ ಎಂದು ನ್ಯಾ, ಉಂಡಿ ಮಂಜುಳಾ ಶಿವಪ್ಪ ಅಭಿಪ್ರಾಯ ಪಟ್ಟರು.

ಪಟ್ಟಣದದಲ್ಲಿ ನ್ಯಾಯಾಲಯ ಸಂಕೀರ್ಣದಲ್ಲಿ ವೈದೇಹಿ ಆಸ್ಪತ್ರೆ ಬೆಂಗಳೂರು, ಸಾರ್ವಜನಿಕ ತಾಲ್ಲೂಕು ಆಸ್ಪತ್ರೆ, ಲಿಂಗಸುಗೂರು, ತಾಲೂಕು ನ್ಯಾಯವಾದಿಗಳ ಸಂಘ, ಲಿಂಗಸುಗೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟನೆಮಾಡಿ ಮಾತನಾಡಿದರು. ಉತ್ತಮ ಅರೋಗ್ಯ ನಮ್ಮ ದಿನನಿತ್ಯದ ಜೀವನ ಶೈಲಿಯಲ್ಲಿದೆ ಎಂದರು.

ನಂತರ ಮಾತನಾಡಿದ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವ್ಯದ್ಯಾಧಿಕಾರಿ ಡಾ.ರುದ್ರಗೌಡ ಪೊಲೀಸ್ ಪಾಟೀಲ್, ಪ್ರತಿಯೊಬ್ಬರು ಆರೋಗ್ಯದ ಅದಗೆಡುವ ಪೂರ್ವದಲ್ಲಿ ರೋಗವನ್ನು ಪತ್ತೆಹಚ್ಚುವದರಿಂದ ರೋಗವನ್ನು ಗುಣಪಡಿಸಿ ಆರೋಗ್ಯಕರವಾದ ವ್ಯಕ್ತಿಯನ್ನು ರೂಪಿಸಬಹುದು ಆದ್ದರಿಂದ ಸಾರ್ವಜನಿಕರು ಇದರ ಉಪಯೋಗ ಪಡೆದು ಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಹೃದಯ ಸಂಬಂಧಿ ಖಾಯಿಲೆಗಳು,ಕ್ಯಾನ್ಸರ್ ತೊಂದರೆಗಳು,ನರರೋಗದ ಸಮಸ್ಯೆಗಳು, ಕಣ್ಣಿನ ತೊಂದರೆಗಳು, ಎಲುಬು–ಕೀಲುಗಳ ತೊಂದರೆ, ಉಚಿತವಾಗಿ ಕಿಡ್ನಿಯಲ್ಲಿ ಕಲ್ಲು ಮುಂತಾದ ಖಾಯಿಲೆಗಳನ್ನು ಉಚಿತವಾಗಿ ತಪಾಸಣೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಭೂಪನಗೌಡ.ವಿ.ಪಾಟೀಲ್ ಅಧ್ಯಕ್ಷರು ತಾಲ್ಲೂಕು ವಕೀಲರ ಸಂಘ, ಡಾ. ಅಲ್ಲಮಪ್ರಭು, ಡಾ.ಸತ್ಯನಾರಾಯಣ ಎಲುಬು ಮತ್ತು ಕೀಲು ತಜ್ಞರು,ಡಾ.ಸಂದೇಶ ಜನರಲ್ ಮೇಡಿಸಿನ್, ಅಂಬಿಕಾ ವಟಗಲ್ ಪ್ರಾಂಶುಪಾಲರು, ಅದ್ವೇಕ ನರ್ಸಿಂಗ್ ಕಾಲೇಜ್, ಬಾಲರಾಜ ಸಾಗರ ಮಾನಮಟ್ಟಿ ಕಾರ್ಯದರ್ಶಿಗಳು, ತಾಲ್ಲೂಕು ವಕೀಲರ ಸಂಘ, ನಾಗರಾಜ ಗಸ್ತಿ, ಮುತಲಿಕ್ ನಾಗರಾಜ ಎಲಿಗಾರ,ಇನ್ನೂ ಮುಂತಾದ ವಕೀಲರು ಮತ್ತು ನ್ಯಾಯಾಲಯದ ಸಿಬ್ಬಂಧಿಗಳಾದ ವೆಂಕೋಬ ಗುಡದನಾಳ, ರಾಜಶೆಖರ, ದೇವರಾಜ ಇತರರು ಇದ್ದರು.

## ಮೊದಲನೇಯ ಪುಟದಿಂದ

# ವಿಕ್ಟೋರಿಯಾ ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿದ ಮುಖ್ಯಮಂತ್ರಿ

ಸರ್ಕಾರದ 108 ಆಂಬ್ಯುಲೆನ್ಸ್ ಲಭ್ಯ: ಖಾಸಗಿ ಆಂಬ್ಯುಲೆನ್ಸ್ ಹಾವಳಿಯ ಬಗ್ಗೆ ಪ್ರತಿಕ್ರಿಯೆ ನೀಡಿ, ಸರ್ಕಾರದ 108 ಆಂಬ್ಯುಲೆನ್ಸ್ ದೊರೆಯುತ್ತದೆ. ದಿನಕ್ಕೆ 40ಕ್ಕೂ ಹೆಚ್ಚು ಹೆರಿಗೆಗಳು ವಾಣಿ ವಿಲಾಸ ಆಸ್ಪತ್ರೆಯಲ್ಲಿ ನಡೆಯುತ್ತಿದೆ. ಬೇರೆ ಬೇರೆ ರಾಜ್ಯದ ಜನರು ಇಲ್ಲಿ ಚಿಕಿತ್ಸೆಗಾಗಿ ಬರುತ್ತಾರೆ. ಜನ ದಟ್ಟಣೆ ಹೆಚ್ಚಿರುವುದರಿಂದ ಆಸ್ಪತ್ರೆಯ ಹಾಸಿಗೆಗಳನ್ನು ಹೆಚ್ಚು ಮಾಡಬೇಕಿದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ತಿಳಿಸಿದರು.

ಗ್ಯಾಸ್ಟ್ರೋ ಎಂಟ್ರಾಲಜಿ ವಿಭಾಗಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು, ಅಂಗಾಂಗ ದಾನಕ್ಕೆ 30 ರಿಂದ 40 ಲಕ್ಷ ವೆಚ್ಚವಾಗುತ್ತದೆ. ಆದರೆ ಇಲ್ಲಿ ಉಚಿತವಾಗಿ ಮಾಡಲಾಗುತ್ತದೆ ಎಂದು ಮುಖ್ಯಮಂತ್ರಿಗಳು ಮತ್ತು ಸಚಿವರು ಮಾಹಿತಿ ನೀಡಿದರು.

300 ಹಾಸಿಗೆಗಳ ಆಸ್ಪತ್ರೆ: 120 ಹಾಸಿಗೆಗಳ ಆಸ್ಪತ್ರೆಯನ್ನು 300 ಹಾಸಿಗೆಗಳಿಗೆ ಹೆಚ್ಚಿಸುವ ಬಗ್ಗೆ ಬೇಡಿಕೆಯಿದೆ. ಈ ಕುರಿತ ಪ್ರಸ್ತಾವನೆ ಸರ್ಕಾರದ ಮುಂದಿದ್ದು ಇದನ್ನು ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸಿಎಂ, ಸಚಿವರಿಂದ ಆಹಾರ ಗುಣಮಟ್ಟ ಪರಿಶೀಲನೆ: ವಿಕ್ಟೋರಿಯಾ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಕ್ಯಾಂಟೀನ್ ಊಟದ ಗುಣಮಟ್ಟವನ್ನು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು ಪರೀಕ್ಷಿಸಿದರು.

# ಜಲಸಮಾಧಿಯಾದವರ ಶೋಧ ಬಿರುಸು

ಮೇಘಸ್ಫೋಟದಲ್ಲಿ ಇಡೀ ಗ್ರಾಮಗಳೇ ನೀರಿನಲ್ಲಿ ಕೊಚ್ಚಿ ಹೋಗಿವೆ. ಘಟನೆಯ ಬಗ್ಗೆ ಮಾಹಿತಿ ನೀಡಿರುವ ಲೆಫ್ಟಿನೆಂಟ್ ಕರ್ನಲ್ ಮನೀಶ್ ಶ್ರೀವಾಸ್ತವ ಖೀರ್‌ಘಡ್ ದರಾಲಿಯಲ್ಲಿ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಈ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆಗಾಗಿ 150 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪ್ರತಿಕೂಲ ಹವಾಮಾನ ಮತ್ತು ಸಂಪರ್ಕ ಕಡಿತದಿಂದಾಗಿ ಪರಿಹಾರ ಕಾರ್ಯ ಸವಾಲಾಗಿ ಪರಿಣಮಿಸಿದೆ.

“ಹರ್ಸಿಲ್ ಪ್ರದೇಶದ ಕೆಳ ಶಿಬಿರದಿಂದ ಎಂಟರಿಂದ ಹತ್ತು ಭಾರತೀಯ ಸೇನಾ ಸೈನಿಕರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ. ಭಾರತೀಯ ಸೇನಾ ಪಡೆಗಳು ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿವೆ” ಎಂದು ಭಾರತೀಯ ಸೇನಾ ಅಧಿಕಾರಿಗಳ ಮೂಲಗಳು ತಿಳಿಸಿವೆ.ದುರಾದೃಷ್ಟವಶಾತ್ ಮೇಘಸ್ಫೋಟ ಮತ್ತು ಮಣ್ಣು ಕುಸಿತವು ಹರ್ಸಿಲ್‌ನಲ್ಲಿರುವ ಭಾರತೀಯ ಸೇನಾ ಶಿಬಿರ ಮತ್ತು ನಮ್ಮ ರಕ್ಷಣಾ ಪಡೆಗಳ ಒಂದು ಭಾಗವನ್ನು ಅಪ್ಪಳಿಸಿತು. ಅದೇನೇ ಇದ್ದರೂ, ಭಾರತೀಯ ಸೇನೆಯು ಸ್ಥಳೀಯ ಜನರಿಗೆ ಸಹಾಯ ಮಾಡಲು ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಲು ದೃಢನಿಶ್ಚಯವನ್ನು ಹೊಂದಿದೆ” ಎಂದು ಕಾರ್ಯಾಚರಣೆಯ ನೇತೃತ್ವ ವಹಿಸಿರುವ ಬ್ರಿಗೇಡ್ ಕಮಾಂಡರ್ ಬ್ರಿಗೇಡಿಯರ್ ಮಂದೀಪ್ ಧಿಲ್ಲೋನ್ ಹೇಳಿದ್ದಾರೆ

ಹಠಾತ್ ಪ್ರವಾಹದಿಂದ ನೆರೆಯ ಹಳ್ಳಿಗಳಲ್ಲಿ ವ್ಯಾಪಕ ಭೀತಿ ಉಂಟುಮಾಡಿದೆ. ಪ್ರದೇಶದ ವೀಡಿಯೊಗಳು ಕೆಸರು ನೀರು ಮತ್ತು ಹೂಳು ನದಿಯ ದಡದಲ್ಲಿರುವ ವಸಾಹತುಗಳ ಕಡೆಗೆ ಇಳಿಜಾರುಗಳ ಮೂಲಕ ಹರಿಯುವುದನ್ನು ತೋರಿಸಿದ್ದು ಜನರು ಭಯದಿಂದ ಕಿರುಚುತ್ತಿರುವುದು ಕೇಳಿಬರುತ್ತಿದ್ದು ಆತಂಕದ ವಾತಾವರಣ ನಿರ್ಮಾಣವಾಗಿದೆ.ಒಂದು ವೀಡಿಯೊದಲ್ಲಿ, ಜನರು ಉಸಿರಾಡಲು ಕಷ್ಟಪಡುತ್ತಿರುವುದು ಮತ್ತು ಪೀಡಿತ ಪ್ರದೇಶಗಳಲ್ಲಿರುವ ತಮ್ಮ ಸಂಬಂಧಿಕರಿಗೆ ಕರೆ ಮಾಡಿ ಅವರು ಚೆನ್ನಾಗಿದ್ದಾರೆಯೇ ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವುದು ಕೇಳಿಸುತ್ತದೆ. ವೀಡಿಯೊದಲ್ಲಿ “ಎಲ್ಲವೂ ಮುಗಿದಿದೆ” ಎಂದು ಹೇಳುವ ಧ್ವನಿ ಕೇಳಿಬರುತ್ತಿದೆ

ಹಿಮನದಿ ಸ್ಫೋಟದಿಂದ ದಿಢೀರ್ ಪ್ರವಾಹ:ತಜ್ಞರ ಶಂಕೆ

ಉತ್ತರ ಕಾಶಿಯಲ್ಲಿ ಮೇಘಸ್ಫೋಟದ ಬದಲು ಹಿಮನದಿ ಕುಸಿತ ಅಥವಾ ಹಿಮನದಿ ಸರೋವರದ ಸ್ಫೋಟಗೊಂಡಿರುವುದು ದಿಢೀರ್ ಪ್ರವಾಹಕ್ಕೆ ಕಾರಣವಾಗಿರಬಗುದು ಎಂದು ತಜ್ಞರು ಶಂಕಿಸಿದ್ದಾರೆ.

ಉತ್ತರಕಾಶಿ ಜಿಲ್ಲೆಯ ಧರಾಲಿ ಗ್ರಾಮವನ್ನು ಧ್ವಂಸಗೊಳಿಸಿದ ದಿಢೀರ್ ಪ್ರವಾಹಕ್ಕೆ ಮೇಘ ಸ್ಫೋಟ ಕಾರಣ ಎನ್ನಲಾಗಿತ್ತು ಆದರೆ ಇದು ಹಿಮನದಿ ಕಸಿತ ಅಥವಾ ಬೇರೆ ಯಾವುದೇ ಕಾರಣದಿಂದ ಹೀಗೆ ಆಗಿರಬಹುದು ಎಂದು ಹೇಳಲಾಗಿದೆ.ಹವಾಮಾನ ಮತ್ತು ಉಪಗ್ರಹ ದತ್ತಾಂಶ ಅಧ್ಯಯನ ಮಾಡಿದ ತಜ್ಞರು ಈ ಅಭಿಪ್ರಾಯ ಹೊರಹಾಕಿದ್ದಾರೆ. ಆದರೂ ಘಟನೆಗೆ ನಿಖರ ಕಾರಣ ತಿಳಿಯುವ ಕೆಲಸ ನಡೆಯುತ್ತಿದೆ ಎಂದು ಹೇಳಿದ್ದಾರೆ.ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ಮುಂದುವರಿದಿದ್ದು, ವಿಜ್ಞಾನಿಗಳು ಗಮನಾರ್ಹವಾದ ಹಿಮಪಾತ, ಹಿಮನದಿ ಕುಸಿತ ಅಥವಾ ಸರೋವರದ ಮೇಲ್ಭಾಗ ಒಡೆದು ವಿನಾಶಕಾರಿ ಪ್ರವಾಹ ಸೃಷ್ಟಿಯಾಗಿರಬಹುದು ಎಂದು ಹೇಳಲಾಗಿದೆ.ವಿಪತ್ತಿನ ಸಮಯದಲ್ಲಿ ಕನಿಷ್ಠ ಮಳೆ ಸುರಿದಿದ್ದು , ಮೋಡ ಸ್ಫೋಟ ಸಿದ್ಧಾಂತದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಹರ್ಸಿಲ್‌ನಲ್ಲಿ ಕೇವಲ 6.5 ಮಿಮೀ ಮಳೆಯಾಗಿದೆ, ಮತ್ತು 24 ಗಂಟೆಗಳಲ್ಲಿ ಒಟ್ಟು ಮಳೆ ಹರ್ಸಿಲ್‌ನಲ್ಲಿ ಕೇವಲ 9 ಮಿಮೀ ಮತ್ತು ಭಟ್ವಾರಿಯಲ್ಲಿ 11 ಮಿಮೀ ಆಗಿತ್ತು.ಸಾಮಾನ್ಯವಾಗಿ ಮೋಡ ಸ್ಫೋಟದಿಂದ ಉಂಟಾಗುವ ಪ್ರವಾಹಕ್ಕೆ ಸಂಬಂಧಿಸಿದ ಮಟ್ಟಕ್ಕಿಂತ ಗಮನಾರ್ಹವಾಗಿ ಕಡಿಮೆಯಾಗಿದೆ

ಕಳೆದ 24 ಗಂಟೆಗಳಲ್ಲಿ ಪೀಡಿತ ಪ್ರದೇಶದಲ್ಲಿ ಹಗುರವಾದ ಮಳೆ ಮಾತ್ರ ಬಿದ್ದಿದೆ.

ಉತ್ತರಕಾಶಿ ಜಿಲ್ಲಾ ಕೇಂದ್ರದಲ್ಲಿ ಕೇವಲ 27 ಮಿಮೀ ಮಾತ್ರ ಮಳೆಯಾಗಿದೆ. ಉಳಿದಂತೆ ಅತಿ ಕಡಿಮೆ ಮಳೆಯಾಗಿದೆ ಎಂದು ಹಿರಿಯ ವಿಜ್ಞಾನಿಯೊಬ್ಬರು ಮಾಹಿತಿ ನೀಡಿದ್ದಾರೆಪ್ರವಾಹದ ಪ್ರಮಾಣ ಅಂತಹ ತೀವ್ರತೆಯ ಪ್ರವಾಹವನ್ನು ಪ್ರಚೋದಿಸಲು ಸಾಕಾಗುವುದಿಲ್ಲ, ಹಿಮನದಿ ಸ್ಫೋಟ ಪ್ರವಾಹ ಆಗಿರಬಹುದು ಎಂದು ಅಂದಾಜು ಮಾಡಲಾಗಿದೆ. ಉಪಗ್ರಹ ಚಿತ್ರಗಳು ಗಮನಾರ್ಹವಾದ ಹಿಮನದಿಗಳು ಮತ್ತು ಪೀಡಿತ ಸ್ಥಳದ ಮೇಲೆ ನೇರವಾಗಿ ಇರುವ ಕನಿಷ್ಠ ಎರಡು ಹಿಮನದಿ ಸರೋವರಗಳು ಇರುವುದನ್ನು ಖಚಿತ ಪಡಿಸಲಾಗಿದೆ. ಖೀರ್ ಗಡ್ ಹೊಳೆಯ ಮೇಲೆ ಹಿಮನದಿ ಇದೆ; ಹಿಮನದಿ ಸರೋವರದ ಸ್ಫೋಟ ಅಥವಾ ಹಿಮನದಿ ಸ್ಫೋಟದಿಂದ ಹಠಾತ್ ನೀರು ಬಿಡುಗಡೆಯಾಗಿದೆ ಎನ್ನಲಾಗಿದೆ 2021ರ ಫೆಬ್ರವರಿ ತಿಂಗಳಲಲ್ಲಿ ಚಮೋಲಿಯಲ್ಲಿ ನಡೆದ ರೈನಿ ದುರಂತದಂತೆಯೇ ಹೆಚ್ಚಿನ ಶಕ್ತಿಯ ಪ್ರವಾಹಕ್ಕೆ ಕಾರಣವಾಗಬಹುದು” ಎಂದು ವಿಜ್ಞಾನಿ ಹೇಳಿದರು.

# ಗ್ರಾ.ಪಂ.ಸಿಬ್ಬಂದಿ ಬೇಡಿಕೆ ಈಡೇರಿಸಲು ಆಗ್ರಹ

**ಕಲಬುರಗಿ,ಆ.06–**ಗ್ರಾಮ ಪಂಚಾಯತ ಸಿಬ್ಬಂದಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ ನೌಕರರ ಸಂಘ (ಸಿಐಟಿಯು ಸಂಯೋಜಿತ)ದ ಜಿಲ್ಲಾ ಅಧ್ಯಕ್ಷ ನಾಗರಾಜ ಜಿ.ಭಂಗೂರ, ಪ್ರಧಾನ ಕಾರ್ಯದರ್ಶಿ ಮಾರುತಿ ಎಸ್.ಸುಗ್ಗಾ ಒತ್ತಾಯಿಸಿದ್ದಾರೆ.



ಈ ಸಂಬಂಧ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿರುವ ಅವರು, ಗ್ರಾಮ ಪಂಚಾಯತ ಪಂಪ್ ಆಪರೇಟರ್, ಜವಾನ್, ಸ್ವಚ್ಛತಾ ಗಾರರು ಸೇರಿದಂತೆ ಎಲ್ಲಾ ನೌಕರರಿಗೆ ಏಕಕಾಲಕ್ಕೆ ಅನುಮೋದನೆ ನೀಡಬೇಕು (31.10.2017ರ ಆದೇಶದಂತೆ), ಕರವಸೂಲಿಗಾರರ/ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ಬಾಕಿ ಇರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿ ಅನುಮೋದನೆ ನೀಡಬೇಕು, ಕರವಸೂಲಿಯಲ್ಲಿ ಶೇ.40% ಸಿಬ್ಬಂದಿಗಳ ವೇತನ ಪಾವತಿಸಲು ಆದೇಶಿಸಬೇಕು, ನಿವೃತ್ತ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ನಿವೃತ್ತ ಉಪಧನ ಮಂಜೂರು ಮಾಡಲು ಆದೇಶ ಮಾಡಬೇಕು, ಗ್ರಾಮ ಪಂಚಾಯತ ಬಿಲ್ ಕಲೆಕ್ಟರ್ ಕಂ/ಕ್ಲರ್ಕ್ ಡಾಟಾ ಎಂಟ್ರಿ ಆಪರೇಟರ್ ವೃಂದದಿಂದ ಗ್ರೇಡ್–2 ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಸೇವೆ ಒಳಗಿನ ನೇರ ನೇಮಕಾತಿಗೆ (ಬಡ್ತಿ) ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಸುಮಾರು 20 ತಿಂಗಳಾದರು ಜಿಲ್ಲಾ ಪಂಚಾಯತ ಆಡಳಿತದ ವಿಳಂಬದಿಂದಾಗಿ ನಿವೃತ್ತಿ ಅಂಚಿನಲ್ಲಿರುವ ಕರವಸೂಲಿಗಾರರಿಗೆ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರಗಳಿಗೆ ಭಾರಿ ಅನ್ಯಾಯ ವಾಗುತ್ತಿದೆ. ಎಲ್ಲಾ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕೇವಲ ಅಂತಿಮ ಆದೇಶ ಹೊರಡಿಸುವುದು ಬಾಕಿ ಇದ್ದು, ತಕ್ಷಣ ನೇಮಕಾತಿ ಆದೇಶ ನೀಡಬೇಕು, ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ 15ನೇ ಆಗಸ್ಟಕ್ಕೆ ಗ್ರಾಮ ಪಂಚಾಯತನಿಂದ ಸಮವಸ್ತ್ರಗಳ ಖರೀದಿ ಮಾಡಿಕೊಡಲು ಆದೇಶಿಸಬೇಕು, ಗ್ರಾಮ ಪಂಚಾಯತ ಸ್ವಚ್ಛತಗಾರರಿಗೆ ಚರಂಡಿ ಮತ್ತು ಬೀದಿ ಸ್ವಚ್ಛಗೊಳಿಸಲು ಬೇಕಾದ ಮೂಲಭೂತ ಸೌಕರ್ಯಗಳು ಒದಗಿಸಿಕೊಡಲು ಆದೇಶಿಸಬೇಕು, ಖಾಲಿ ಇರುವ ಕರವ ಸೂಲಿಗಾರರ ಮತ್ತು ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಪಂಪ್ ಆಪರೇಟರ್ ಹುದ್ದೆಯಿಂದ ಬಡ್ತಿ ನೀಡಲು ಆದೇಶಿ ಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಬೇಡಿಕೆಗಳನ್ನು ಒಂದು ವಾರದೊಳಗೆ ಈಡೇರಿಸದಿದ್ದಲ್ಲಿ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾ ಪಂಚಾಯತಿ ಆವರಣದಲ್ಲಿ ಅನಿರ್ಧಿಷ್ಟ ಧರಣಿ ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದು ಮನವಿ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಸಂಘದ ಜಿಲ್ಲಾ ಉಪಾಧ್ಯಕ್ಷರು ಸೇರಿದಂತೆ ಸಂಘದ ಇತರ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶಿಶು ಪಾಲನಾ ಕೇಂದ್ರ: ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

**ರಾಯಚೂರು,ಆ.06–**ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಶಿಶು ಪಾಲನಾ ಕೇಂದ್ರ ಪ್ರಾರಂಭಿಸ ಲಾಗಿದ್ದು, ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳನ್ನು ಸಂದರ್ಶನದ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಶಿಶು ಪಾಲನಾ ಕೇಂದ್ರದಲ್ಲಿ ಶಿಕ್ಷಕಿ (ಕಾರ್ಯಕರ್ತೆ) 01 ಹುದ್ದೆಗೆ ಪದವಿ ವಿದ್ಯಾರ್ಹತೆ ಪಡೆದಿರಬೇಕು. ಶಾಲಾ ಪೂರ್ವ ಶಿಕ್ಷಣ ಪಡೆದಿರುವ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು. ಮಾಸಿಕ 10 ಸಾವಿರ ರೂ.ಗಳನ್ನು ಗೌರವಧನ ನೀಡಲಾಗುವುದು.

ಸಹಾಯಕಿ 02 ಹುದ್ದೆಗೆ ಕನಿಷ್ಠ 10ನೇ ತರಗತಿ ವಿದ್ಯಾರ್ಹತೆ ಪಡೆದಿರಬೇಕು. ಶಿಶು ಪಾಲನಾ ಕೇಂದ್ರದ ಹತ್ತಿರ ವಾಸವಿರಬೇಕು. ಮಾಸಿಕ 6 ಸಾವಿರ ರೂ.ಗಳನ್ನು ಗೌರವಧನ ನೀಡಲಾಗುವುದು.

**ವಿಶೇಷ ಸೂಚನೆಗಳು:** ಹುದ್ದೆಗಳು ಶಿಶು ಪಾಲನಾ ಕೇಂದ್ರ ಯೋಜನೆಯು ಜಾರಿಯಲ್ಲಿರುವವರೆಗೆ ಮಾತ್ರ ಇರುತ್ತವೆ. ಅಭ್ಯರ್ಥಿಗಳು ಹುದ್ದೆಗೆ ಅನುಗುಣವಾಗಿ ವಿದ್ಯಾರ್ಹತೆ ಪಡೆದಿರಬೇಕು. ಕಂಪ್ಯೂಟರ್ ಜ್ಞಾನದ ಬಗ್ಗೆ ಖಾತ್ರಿ ಪಡಿಸಿಕೊಂಡು ಕೌಶಲ್ಯ ಪರೀಕ್ಷೆ ನಡೆಸಿ ಸಂದರ್ಶನ ಮೂಲಕ ಆಯ್ಕೆ ಮಾಡಲಾಗುವುದು. (ಶಿಕ್ಷಕಿ ಅಥವಾ ಕಾರ್ಯಕರ್ತೆ ಹುದೆಗೆ ಮಾತ್ರ ಅನ್ವಯ). ಅಭ್ಯರ್ಥಿಗಳ ಆಯ್ಕೆಯು ತಾತ್ಕಾಲಿಕವಾಗಿರುತ್ತದೆ. ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ ವಾಗಿರುತ್ತದೆ. ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಯಾವುದೇ ಮೀಸಲಾತಿಗಳು ಅನ್ವಯಿಸುವುದಿಲ್ಲ. ಈ ಮೇಲಿನ ಹುದ್ದೆಗಳ ಕರ್ತವ್ಯವು ಕ್ಷೇತ್ರಮಟ್ಟದಲ್ಲಿ ನಿರ್ವಹಿಸಬೇಕಾಗಿರುತ್ತದೆ. ಈ ಹುದ್ದೆಗಳಿಗೆ ರಾಯಚೂರು ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅರ್ಹ ಸ್ಥಳೀಯ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಯೋಜನೆಯ ಅನುಷ್ಠಾನದ ಹಿತದೃಷ್ಠಿಯಿಂದ ಆಯ್ಕೆ ಸಮಿತಿಯ ತೀರ್ಮಾನದಂತೆ ಹಾಗೂ ನಿಗಧಿಪಡಿಸಿದ ಮಾನದಂಡದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳ ಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿಗಳು ನಕಲಿ ಅಥವಾ ಖೊಟ್ಟಿ ಎಂದು ಸಾಬಿತಾದಲ್ಲಿ ಆಯ್ಕೆಯನ್ನು ಕೈಬಿಟ್ಟು ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ದಾಖಲೆಗಳು:** ನಿಗಧಿತ ನಮೂನೆಯಲ್ಲಿ ಅರ್ಜಿ, ಹುದ್ದೆಗೆ ನಿಗಧಿಪಡಿಸಿದ ವಿಧ್ಯಾರ್ಹತೆಯ ದಾಖಲಾತಿಗಳು. ಅನುಭವ ಪ್ರಮಾಣ ಪತ್ರಗಳು. ಕಂಪ್ಯೂಟರ್ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ (ಶಿಕ್ಷಕಿ/ ಕಾರ್ಯಕರ್ತೆ ಹುದ್ದೆಗೆ ಮಾತ್ರ ಅನ್ವಯ). ತಹಶೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರದೊಂದಿಗೆ ಆಸಕ್ತ ಅಭ್ಯರ್ಥಿಗಳು ಆಗಸ್ಟ್ 14ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಚೇರಿ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅವಧಿ ಮುಗಿದ ನಂತರ ಬಂದ ಯಾವುದೇ ಅರ್ಜಿಗಳು ಸ್ವೀಕರಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟ, ಉಪನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಐ.ಡಿ.ಎಸ್.ಎಂ.ಟಿ ಲೇ ಔಟ್ ಮಂತ್ರಾಲಯ ರೋಡ್, ರಾಯಚೂರು–584101, ಮೊಬೈಲ್ ಸಂಖ್ಯೆ: 9620566307ಗೆ ಸಂಪರ್ಕಿಸುವಂತೆ ಸ್ತ್ರೀಶಕ್ತಿ ಒಕ್ಕೂಟದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವನಿಧಿ ಯೋಜನೆಯಡಿ ನೋಂದಣಿ, ಸ್ವಯಂ ಘೋಷಣೆಗೆ ಸೂಚನೆ

**ರಾಯಚೂರು.ಆ.06–** ರಾಜ್ಯ ಸರ್ಕಾರದ ಯುವನಿಧಿ ಯೋಜನೆಯಲ್ಲಿ ನೋಂದಣಿಯಾದ ಅಭ್ಯರ್ಥಿಗಳು ವೆಬ್‌ಸೈಟ್ ವಿಳಾಸ: https://sevasindhuservices, karnataka. gov.in ನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುವುದನ್ನು ಪರಿಶೀಲಿಸಿ ಮತ್ತು ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಪ್ರತಿ ಮೂರನೇ ತಿಂಗಳಿನ 5ನೇ ತಾರೀಕಿನಿಂದ 25ನೇ ತಾರೀಕಿನೊಳಗೆ ಸ್ವಯಂ–ಘೋಷಣೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳಬೇಕೆಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳ ಸ್ವಯಂ ಘೋಷಣೆಯನ್ನು ಆಗಸ್ಟ್ 25ರೊಳಗೆ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ 08532–231684ಗೆ ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ಅಧಿಕಾರಿ ಪತ್ರಿಕಾ ಪ್ರಕಟಣೆಯನು ಉದ್ಯೋಗಾಧಿಕಾರಿಗಳಾದ ನವೀನಕುಮಾರ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರತ್ಯೇಕ ಕೈಗಾರಿಕಾ ನೀತಿ ರಚನೆಗೆ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಗೆ ಮನವಿ

**ಕಲಬುರಗಿ,ಆ.6–** ಕೈಗಾರಿಕೆಯು ಆರ್ಥಿಕಾಭಿವೃದ್ಧಿಯ ಇಂಜೀನು ಎಂದು ಹೇಳಲಾಗುತ್ತದೆ. ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾಗಲು ಕೈಗಾರಿಕೆಗಳು ಬೇಳೆಯಬೇಕು ಇದಕ್ಕಾಗಿ ಪ್ರತ್ಯೇಕ ಕೈಗಾರಿಕಾ ನೀತಿಯನ್ನು ಸರ್ಕಾರ ರಚಿಸಲು ಮುಂದಾಗಬೇಕು ಎಂದು ಕೆಕೆಸಿಸಿಐ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಉಮಾಕಾಂತ ನಿಗ್ಗುಡಗಿ ಮತ್ತು ಅಮರನಾಥ ಪಾಟೀಲ ಅವರು ಮನವಿ ಮಾಡಿದ್ದಾರೆ.



ಪ್ರತ್ಯೇಕ ಕೈಗಾರಿಕಾ ನೀತಿಯನ್ನು ರಚಿಸುವುದು.

ಪತ್ರಿಕಾ ಭವನಾದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭಾಗದ ಪ್ರಗತಿಯನ್ನು ಪರಿಶೀಲಿಸಿದರೆ ನಾವುಗಳು ಅತ್ಯಂತ ಹಿಂದುಳಿದಿದ್ದೇವೆ. ಇದಕ್ಕೆ ಮುಖ್ಯ ಕಾರಣ ಕೈಗಾರಿಕೆಗಳ ಕೊರತೆ ಎಂದು ಅವರು ಹೇಳಿದರು.

ಕಳೆದ 2022–23ರಲ್ಲಿ ರಾಜ್ಯದ ಒಟ್ಟು ಆದಾಯಕ್ಕೆ ಈ ಭಾಗದ ಎಲ್ಲಾ ವಲಯಗಳ ಕೊಡುಗೆ ಶೇ. 9.5 ಅಂದರೆ ಈ ಭಾಗದಲ್ಲಿ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯಗಳ ತುಂಬಾ ಹಿಂದುಳಿದಿವೆ.

ಈ ಭಾಗದ ಕೆಕೆಸಿಸಿಐ ಸಂಸ್ಥೆಯು ತನ್ನ ಸದಸ್ಯರನ್ನೊಳಗೊಂಡು ಇತರ ಪರಿಣಿತರನ್ನ ಹಾಗೂ ಸಂಘ ಸಂಸ್ಥೆಗಳನ್ನು ಆಹ್ವಾನಿಸಿ ಸಭೆಯನ್ನು ನಡೆಸಿ ಕೆಳಗಿನ ಶಿಫಾರಸ್ಸುಗಳನ್ನು ದಿನಾಂಕ 07–08–2025ರಂದು ಡಾ. ಗೋವಿಂದರಾವ್ ಅಧ್ಯಕ್ಷರು, ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ, ಬೆಂಗಳೂರು ರವರ ಕಲಬುರಗಿಯಲ್ಲಿ ಆಯೋಜಿಸಲಾದ ಸಮಾಲೋಚನಾ ಸಭೆಯಲ್ಲಿ ಪ್ರತ್ಯೇಕ ಕೈಗಾರಿಕಾ ನೀತಿ ಸೇರಿದಂತೆ ಪ್ರಮುಖ ಬೇಡಿಕೆಯ ಮನವಿಯಲ್ಲಿ ಸಲ್ಲಿಸಲಾಗುವುದು ಎಂದು ಅವರು ಹೇಳಿದರು.

.ಪ್ರತ್ಯೇಕ ಕೈಗಾರಿಕಾ ನೀತಿ:– ಕೈಗಾರಿಕೆಯು ಆರ್ಥಿಕಾಭಿವೃದ್ಧಿಯ ಇಂಜೀನು ಎಂದು ಹೇಳಲಾಗುತ್ತದೆ. ಆದ್ದರಿಂದ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಫಲವಾಗಿ ಕೈಗಾರಿಕೆಗಳು ಬೇಳೆಯಬೇಕೆಂದರೆ ಇದಕ್ಕೆ ಒಂದು ಅನಿವಾರ್ಯವಾಗಿದೆ. ಈ ಕೈಗಾರಿಕಾ ಕೆಐಎಡಿಬಿ ಯು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಿ ಸಾಹಸಿ ಉದ್ದಿಮೆದಾರರಿಗೆ ರಿಯಾಯಿತಿ ದರದಲ್ಲಿ ನೀಡಬೇಕು. ಕೆಎಸ್‌ಎಸ್‌ಐಡಿಸಿ (ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ) ಸಹ ಸಣ್ಣ ಕೈಗಾರಿಕಾಗಳನ್ನು ಉತ್ತೇಜಿಸಬೇಕು ಮತ್ತು ಅಭಿವೃದ್ಧಿಪಡಿಸಬೇಕು. ವಿಶೇಷವಾಗಿ ಪ್ರದೇಶವು ಹಿಂದುಳಿದಿರುವುದರಿಂದ ಕಚ್ಚಾ ವಸ್ತುಗಳ ಖರೀದಿ, ಮಾರುಕಟ್ಟೆ, ತಾಂತ್ರಿಕ ಬೆಂಬಲ ಮತ್ತು ನೆರವುಗಳನ್ನು ಒದಗಿಸಬೇಕು. ಹೂಡಿಕೆ ಉತ್ತೇಜನ ಮಂಡಳಿ (ಇನ್ ವೆಸ್ಟರ ಪ್ರಮೋಷನ್ ಬೊರ್ಡ) ಸ್ಥಾಪನೆ ಮಾಡುವ ಮೂಲಕ ಈ ಭಾಗದಲ್ಲಿ ಬಡತನ ಮತ್ತು ನಿರುದ್ಯೋಗಕ್ಕೆ ಪರಿಹಾರ ಕಂಡುಕೊಳ್ಳಲು ಈ ಬೇಡಿಕೆಗಳು ಅನುಕೂಲ ವಾಗಲಿವೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಉಮಾಕಾಂತ ನಿಗ್ಗುಡಗಿ, ಅಮರನಾಥ ಪಾಟೀಲ, ಡಾ.ಬಸವರಾಜ ಕುನ್ನೂರ, ಶಶಿಕಾಂತ ಪಾಟೀಲ, ಶಿವರಾಜ ಇಂಗಿನಶೆಟ್ಟಿ, ಉತ್ತಮ ಬಜಾಜ್, ಶಾಮ ಶೆಟ್ಟಿ ಸೇರಿದಂತೆ ಹಲವರಿದ್ದರು.

# ದುರ್ಗಾಪರಮೇಶ್ವರಿ ದೇವಸ್ಥಾನ ಬೀಗ ಮುರಿದು 1.36 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು

**ಕಲಬುರಗಿ,ಆ.06–**ತಾಲ್ಲೂಕಿನ ಶ್ರೀನಿವಾಸ ಸರಡಗಿ ಗ್ರಾಮ ಸಮೀಪದ ಗೊಂಧಿಗೇರಿ ತಾಂಡಾದಲ್ಲಿರುವ ಎರಡು ದುರ್ಗಾಪರಮೇಶ್ವರಿ ದೇವಸ್ಥಾನಗಳ ಬೀಗ ಮುರಿದು ಕಳ್ಳರು 1.36 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ದೋಚಿಕೊಂಡು ಹೋಗಿದ್ದಾರೆ.

ಒಂದು ದೇವಸ್ಥಾನದ ಬೀಗ ಮುರಿದು 26 ಸಾವಿರ ರೂ.ಮೌಲ್ಯದ 52 ತೊಲೆಯ ಬೆಳ್ಳಿಯ ಕಿರೀಟ, 5,500 ರೂ.ಮೌಲ್ಯದ 11 ತೊಲೆಯ ಬೆಳ್ಳಿಯ ಕೈಖಡಗ, 60 ಸಾವಿರ ರೂ.ಮೌಲ್ಯದ 15 ಗ್ರಾಂ.ಬಂಗಾರದ 3 ಸೆಟ್ ಬಂಗಾರದ ಕರಿಮಣಿಯ ತಾಳಿ, 500 ರೂ.ಮೌಲ್ಯದ 10 ಗ್ರಾಂ.ಬೆಳ್ಳಿಯ ಕಣ್ಣ ಬಟ್ಟಲ್, ಇನ್ನೊಂದು ದೇವಸ್ಥಾನದ ಬೀಗ ಮುರಿದು 40 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಕರಿಮಣಿಯ ತಾಳಿ, 4 ಸಾವಿರ ರೂ.ಮೌಲ್ಯದ 1 ಗ್ರಾಂ.ಬಂಗಾರದ ಮೂಗಿನ ನತ್ತು ಕಳವು ಮಾಡಲಾಗಿದೆ.

ಈ ಸಂಬಂಧ ದುರ್ಗಾಪರಮೇಶ್ವರಿ ದೇವಸ್ಥಾನದ ಪೂಜಾರಿ ಗುರುನಾಥ ರಾಠೋಡ್ ಎಂಬುವವರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# "ವಿದ್ಯಾರ್ಥಿ ಹೇಗಿರಬೇಕು...."

ವಿದ್ಯಾರ್ಥಿ ಜೀವನ ಬಂಗಾರದ ಜೀವನ ಎನ್ನಲಾಗುತ್ತದೆ. ಅಂತಹ ಜೀವನದಲ್ಲಿ ಶಿಸ್ತು,ಸಂಯಮ, ಸಮಯಪಾಲನೆ,ಗುರುಹಿರಿಯ ಮೇಲಿನ ಭಕ್ತಿ ಸೇರಿ ಕೆಲವೊಂದು ಅಂಶಗಳನ್ನು ಅಳವಡಿಸಿ ಕೊಳ್ಳುವುದು ಅತ್ಯಂತ ಅವಶ್ಯ ಕೂಡ ಆಗಿದೆ.ಅಂತಹ ಬಂಗಾರದ ಜೀವನ ಬೆಳಗಲು ಈ ಕೆಳಗಿನ ಜವಾಬ್ದಾರಿಗಳನ್ನು ನಿಭಾಯಿಸುವ ಶಕ್ತಿ ನಿಮ್ಮದಾಗಲಿ..

* ಜೇಬಲ್ಲಿ ಯಾವಾಗಲು ಒಂದು ಪೆನ್ನಿರಲಿ.

* ಪ್ರತಿಯೊಬ್ಬರ ಬದುಕು ಬದಲಾಗುವುದು ಗುರುಗಳಿಂದ ಎಂಬುದು ಮನದಟ್ಟ ಮಾಡಿಕೊ.

* ಗುರುವಿಗೆ ತಲೆಬಾಗು.

* ಗುರುಗಳ ಆಶೀರ್ವಾದ ಇರಲಿ.

* ಕಲಿಯುವುದಕ್ಕೆ ಮನಸ್ಸಿನಿಂದ ಒಪ್ಪಿಕೊಂಡಿರಬೇಕು.

* ಹುಟ್ಟಿದ್ದೆ ಸಾದಿಸಲು.

* ಬಾಗುವ ಗುಣ ಇರಬೇಕು.

* ಜೀವನದ ಗುರಿ ಹೊಂದಿಕೊಳ್ಳು.

* ಗುರಿ ಚಿಕ್ಕದಾಗಿರಬಾರದು.

* ನಯ ವಿನಯತೆಯುಳ್ಳವನಾಗಿರಬೇಕು.

* ಪೂರ್ವಗ್ರಹ ಪೀಡಿತನಾಗಿರಬಾರದು

* ಆಸಕ್ತಿ ಹೊಂದಿರಬೇಕು.

* ಗುರುವಿನ ಮಾತು ಸ್ವೀಕರಿಸುವ ಗುಣ ಇರಲಿ.

* ಶಿಸ್ತು ಪ್ರನುಖವಾಗಿ ಅಳವಡಿಸಿಕೊಳ್ಳಿ.

* ತನು, ಮನ ಮತ್ತು ದನವನ್ನು ತ್ಯಾಗ ಮಾಡುವವನಾಗಿರಬೇಕು.

* ಕಮಿಟ್ಮೆಂಟ್ (ಬದ್ಧತೆ) ಇರಬೇಕು.

* ಗುರುಗಳ ಬಗ್ಗೆ ಹಿಂದೆ ಮಾತಾಡುವವನಾಗಿರಬಾರದು.

* ಗುರುಗಳ ಬಗ್ಗೆ ಹೆಮ್ಮೆ ಇರಬೇಕು.

* ಗುರುಗೆ ನಿಕ್ ನೇಮ್ ಅಡ್ಡ ಹೆಸರಿಡಬಾರದು.

* ಎಲ್ಲಾ ವಿಷಯಗಳ ಭೋದಕರಿಗೆ ಸಮಾನ ಗೌರವ ನೀಡಬೇಕು.

* ಒಪ್ಪಿಕೊಳ್ಳುವ ಗುಣ ಇರಬೇಕು.

* ಶಿಕ್ಷಕ ಅವಕಾಶ ಕೊಟ್ಟಾಗ ಬಳಸಿಕೊಳ್ಳಬೇಕು.

* ಗುರುಗಳು ಕಂಡಾಗ ಗೌರವದಿಂದ ಶುಭಾಷಯ ಹೇಳಬೇಕು.

* ಗುರುವಿನ ಶಿಕ್ಷೆಗೆ ಪ್ರಶ್ನಿಸಬಾರದು.

* ಗುರುವಿನ ಶಿಕ್ಷೆ ನಿನ್ನ ಮುಂದಿನ ಅಘಾತ, ಅಪಾಯಕಾರಿ, ಅಗೌರವವನ್ನು ತಪ್ಪಿಸುತ್ತದೆ ಎಂಬ ನಂಬಿಕೆ ಇರಲಿ.

* ನಿನ್ನ ನಡೆ ಇತರರಿಗೆ ಮಾದರಿಯಾಗಿರಲಿ.

* ಎದುರು ಉತ್ತರಿಸಬಾರದು.

* ವಾದ ಮಾಡಬೇಕು ಅದು ಅರೋಗ್ಯಕರವಾಗಿರಬೇಕು.

* ಮನಸಿನ ಮಾತು ವೈಯಕ್ತಿಕವಾಗಿ ಬೇಟಿ ಮಾಡಿ ಹಂಚಿಕೊಳ್ಳಬೇಕು.

* ಶಿಕ್ಷಕರ ಬಗ್ಗೆ ಅನಾವಶ್ಯಕ ಮಾತಾಡಿದ ಮಾತುಗಳನ್ನು ಅವರ ಬಳಿ ಹೇಳಿಕೊಳ್ಳಬಾರದು.

* ಹೆಚ್ಚಿನ ಜ್ಞಾನ ಅನುಭವ ಇದ್ದರೆ ತಿಳಿಸಬೇಕು.

* ಶಿಕ್ಷಕರೊಂದಿಗೆ ನಿರಂತ ಸಂಪರ್ಕ ಇರಲಿ.

* ಇಷ್ಟದ ಗುರು ಇಷ್ಟ ಇಲ್ಲದ ಗುರು ಎಂದು ಭೇದ ಬೇಡ, ನಿನ್ನ ಬೆಳವಣಿಗೆ ಕುಂಟಿತವಾಗಬಹುದು.

* ಗುರುಗಳನ್ನು ಜಾತಿ, ಧರ್ಮ, ಪಂಥಗಳ ಗುಂಪಿಗೆ ಸೇರಿಸದಿರು.

* ಶಿಕ್ಷಕರ ಪ್ರತಿ ಮಾತಿನ ಹಿಂದೆ ಒಂದು ಉದ್ದೇಶ ಇರುತ್ತದೆ ಅದನ್ನು ಕೇಳದೇ ತಿಳಿದುಕೊ.

* ನಿನಗೆ ಜ್ಞಾನ ಇರಬಹುದು ಶಿಕ್ಷಕರಿಗೆ ಅನುಭವ+ಜ್ಞಾನ ಇರುತ್ತದೆ.

* ಗುರು ಹೊಗಳಿಕೆಯಿಂದ ಹುಬ್ಬಿಕೊಳ್ಳುತ್ತಾರೆ ಎಂಬ ಭಾವ ಬಿಡು.

* ಗುರು ನಿನಗೆ ತಿಳಿಯದಂತೆ ನಿನ್ನನ್ನು ವೀಕ್ಷಿಸುತ್ತಾರೆ ಎಂಬುದು ಗೊತ್ತಿರಲಿ.

* ನಿನ್ನ ಮುಂದಿನ ಭವಿಷ್ಯ ಅವರಿಗೆ ತಿಳಿದಿರುತ್ತೆ ಇಲ್ಲಾ ಬದಲಾಯಿಸಲು ಪ್ರಯತ್ನಿಸುತ್ತಿರುತ್ತಾರೆ ಹಾಗಾಗಿ ನೀ ಹೇಳಿದಂತೆ ಕೇಳು.

* ಶುಭ್ರವಾಗಿ, ನೀಟಾಗಿ, ಲಕ್ಷಣವಾಗಿರು.

* ಕಲಿಕೆ ಇಲ್ಲದವರಿಗೂ ನಿನಗೂ ವ್ಯತ್ಯಾಸ ಇರಲಿ ಅದು ಸ್ಟೈಲ್ ನಲ್ಲಿ ಅಂತ ತಿಳಿಯಬೇಡ.

* ನಿನ್ನ ನೋಡಿದ ತಕ್ಷಣ ನೀ ವಿದ್ಯಾವಂತ ಎಂದು ಗುರುತಿಸುವಂತಿರು.

* ನಿನ್ನ ಮಾತಿನಲ್ಲಿ ಜ್ಞಾನ, ಅನುಭವ, ಹಂಬಲ, ವಿನಯತೆ ಇರಲಿ.

* ಸೂಕ್ಷ್ಮತೆಯಿಂದ ಅವಲೋಕನ ಮಾಡುತ್ತಿರು.

* ಎಲ್ಲಾ ವಿಷಯಗಳು ಹೇಳಿ ಕಲಿಸುವಂತಿರುವುದಿಲ್ಲ ಕೆಲವು ನೋಡಿ ಕಲಿಬೇಕಾಗುತ್ತದೆ.

* ಶಿಕ್ಷಕರ ಸಂಜ್ಞೆಗಳನ್ನು ಗಮನಿಸಿ ಪಾಲಿಸು.

* ನಾಯಕನ ಎಲ್ಲಾ ಲಕ್ಷಣಗಳಿರಲಿ.

* ಆತುರ, ಸೋಮಾರಿತನ ಹಲಾಸ್ಯತನ, ಕೇವಲತನ, ಬೇಜವಾಬ್ದಾರಿತನ ಬೇಡ.

* ಶಿಕ್ಷಕ ವಿಷಯಕ್ಕೆ ಮಾತ್ರ ಸೀಮಿತವಲ್ಲ ಜೀವನದ ಹೆಜ್ಜೆಗಳನ್ನು ತಿದ್ದುವ ಗುರು ಎಂದು ಭಾವಿಸು.

* ನಿನ್ನ ಭಾಹಿರ ಆಸೆ ಆಕಾಂಕ್ಷೆಗಳನ್ನು ನಿನ್ನ ಹತೋಟಿಯಲ್ಲಿಟ್ಟುಕೊ.

* ಅನಾವಶ್ಯಕ ಪ್ರಶ್ನೆಗಳನ್ನು ಕೇಳಿ ನಿನ್ನ ವ್ಯಕ್ತಿತ್ವ ಬೀಳಿಸಿಕೊಳ್ಳದಿರು.

* ಹೊರಾಟದ ಮನೋಭಾವ ಇರಲಿ.

* ಎಲ್ಲಿ ಹೇಗಿರಬೇಕು ಆಗಿರು.

* ದಾನ ಧರ್ಮದ ಗುಣ ಬೆಳೆಸಿಕೊ.

* ಅಪರಾಧಗಳ ಬಗ್ಗೆ ಎಚ್ಚರ ವಿರಲಿ.

* ಕಾನೂನು ಪಾಲಿಸುವಂತನಾಗು.

* ಪರಿಸರ ಕಾಳಜಿ ಇರಲಿ.

* ಕೆಲ ಪ್ರಶ್ನೆಗಳನ್ನು ವೈಯಕ್ತಿಕವಾಗಿ ಉತ್ತರ ಪಡಿ.

* ಗುರುವಿನ ಹೊಗಳಿಕೆ ಮತ್ತು ತೆಗಳಿಕೆ ಸಮಾನವಾಗಿ ಸ್ವೀಕರಿಸು.

* ಹಿಗ್ಗಿ ಅಹಂಕಾರಿಯಾಗಬೇಡ, ಕುಗ್ಗಿ ಕಿನ್ನತೆಯೊಳಗಾಗಬೇಡ.

* ಎಲ್ಲಾ ಶಿಕ್ಷಕರಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿ( favourite student) ಆಗಿರು.

* ಎಲ್ಲಾ ಕ್ಷೇತ್ರದಲ್ಲಿ ಭಾಗಿಯಾಗಿ ಜ್ಞಾನ, ನೈಪುಣ್ಯತೆ, ಅನುಭವ, ಪ್ರಶಸ್ತಿ ಪಡಿ.

* ಎಲ್ಲಾ ತಿಳಿ ಆದರೆ ಅನುಸರಿಸುವಾಗ ಸ್ವಂತ ನಿರ್ಧಾರ ಇರಲಿ.

* ಶಿಕ್ಷಕರ ಮಾತಿಗೆ ನಿನ್ನಲ್ಲಿ ಒಪ್ಪಿಗೆ ಇರಲಿ ಆದರೆ ನಿನ್ನ ಅಭಿಪ್ರಾಯ ಅವರ ಮೇಲೆ ಹೇರದಿರು.

* ಸಮಾನ್ಯರಿಗಿಂತ ನೀ ಅಸಮಾನ್ಯನಾವು.

* ಪ್ರತಿಭಾವಂತ ನಾಗು.

* ಪರಿಕ್ಷಿಸದೇನೆ ಎಲ್ಲಾನೂ ಒಪ್ಪಿಕೊಳ್ಳದಿರು.

* ಪಂಚೇಂದ್ರಿಯಗಳನ್ನು ನಿನ್ನ ಹತೋಟಿಯಲ್ಲಿಟ್ಟಿರು.

* ಮನಸ್ಸು ಬಯಸಿದ್ದು ಮಾಡಬೇಡ ಬುದ್ದಿ ಹೇಳಿದ್ದು ಮಾಡು.

* ಗುರುವಿನ ಮಾತು ಪಾಲಿಸದವನು ಜೀವನದಲ್ಲಿ ಯಾರು ಉದ್ದಾರವಾಗಿಲ್ಲ ಎಂಬ ನಗ್ನ ಸತ್ಯ ತಿಳಿದಿರಲಿ.

* ಸಮಯ ಪಾಲಿಸು.

* ಶಾಲೆಯ ಸಮಯ ದುಡಿಯಲು, ಗಳಿಸಲು, ಶೋಕಿ ಮಾಡಲು ಮೀಸಲಿರಿಸಬೇಡ.

* ಬರವಣಿಗೆ ಕೌಶಲ್ಯ ವೃದ್ಧಿಸಿಕೊ.

* ಕಲಿಕೆ ಸಾಗರ ಸಾದ್ಯವಾದಷ್ಟು ಮುಟ್ಟಲು ಪ್ರಯತ್ನಿಸು.

* ತರಗತಿಯಲ್ಲಿ ಕುಚೇಷ್ಟೆ ಬೇಡ ಕಲಿಕೆ ಹಂಬಲ ಇರಲಿ.

* ಕಲೆಗೆ ಬೆಲೆ ಕೊಡು.

* ದುಶ್ಚಟಗಳಿಂದ ದೂರ ಇರು.

* ತೃಪ್ತನಾಗು ಅತೃಪ್ತತೆ ಬೇಡ. * ಇರುವುದರಲ್ಲಿ ಸಂತೋಷ ಪಡು ಇಲ್ಲದಿರುವ ಬಗ್ಗೆ ಕೊರಗು ಬೇಡ.

* ನೈಸರ್ಗಿಕ ಸಂಪತ್ತು ಉಳಿಸು ಜಾಗೃತಿ ಮೂಡಿಸು.

* ಪೋಷಕರೊಂದಿಗೆ ನಿನ್ನ ಅಲೋಚನೆ, ಕನಸ್ಸು ಹಂಚಿಕೊಂಡು ಬೆಂಬಲಿಸುವಂತೆ ಮಾಡು.

* ಕನಸ್ಸು ಕಾಣು ಆದರೆ ಹಗಲು ಗನಸ್ಸುಬೇಡ.

* ಎಲ್ಲಾರೊಂದಿಗೆ ಇರು ಆದರೆ ಅವರ ಗುಣಗಳನ್ನು ಆಯ್ಕೆ ಮಾಡಿ ಅಳವಡಿಸಿಕೊ.

* ಒಳ್ಳೆಯ ಆತ್ಮೀಯ ಗೆಳೆತನ ಮಾಡು.

* ದುಷ್ಟರ ಸಹವಾಸದಿಂದ ದೂರ ಇರು.

* ನೀ ನಡೆಯುವ ಮಾರ್ಗ ಆಗಾಗ ಪರೀಕ್ಷಿಸಿಕೊಳ್ಳುತ್ತಿರು.

* ದೇಹ ಪ್ರೇಮಕ್ಕಿಂತ ದೇಶ ಪ್ರೇಮ ಇರಲಿ.

* ದೇಶ ಪ್ರೇಮ ಎದೆಯಲ್ಲಿರಲಿ.

* ಭಾಗವಹಿಸುವುದನ್ನು ಕಲಿ.

* ಸೋಲು ಒಪ್ಪಿಕೊಳ್ಳುವುದ ತಿಳಿದಿರಲಿ ಗೆಲವಿನ ಸಂಭ್ರಮ ಸಂತೋಷ ನೀಡುತ್ತದೆ.



ಮಹಿಬೂಬ್ ಮದ್ಲಾಪುರ
ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳು ಮಾನವಿ.

* ಎನನ್ನಾದರು ಪಡೆಯಲು ಶ್ರಮದ ಅವಶ್ಯ ಇದೆ ಎಂದು ತಿಳಿದಿಕೊ.

* ನಿನ್ನ ಮಾತಿನ ಶೈಲಿ ನಿನ್ನ ವ್ಯಕ್ತಿತ್ವ ಸೂಚಿಸುತ್ತದೆ.

* ಪತ್ರಿಕೆ, ಪುಸ್ತಕ ಒದುವ ಹವ್ಯಾಸ ಇರಲಿ.

* ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರತಿಭೆ ಇರಲಿ.

* ನಿನಗಿಂತ ಕೆಳಗಿರುವವರೊಂದಿಗೆ ನಿನ್ನ ಹೋಲಿಕೆ ಬೇಡ ಮೇಲಿರುವವರೊಂದಿಗೆ ಹೋಲಿಸಿಕೋ.

* ಆರೋಗ್ಯಕರ ಸ್ಪರ್ಧೆಯಲ್ಲಿರು.

* ಸಿಟ್ಟು ತನ್ನ ವೈರಿ ಶಾಂತಿ ಪರರ ವೈರಿ ಶಾಂತನಾಗಿರು.

* ತಂದೆ ತಾಯಿಗೆ ವಿದೆಯಕನಾಗಿರು ಮೊದಲ ಗುರುಗಳು.

* ಮೊಬೈಲ್ ಹೇಗೆ ಬಳಸಬೇಕು ಏನನ್ನು ನೋಡಬೇಕು ಏನು ನೋಡಬಾರದು ಎಂಬುದು ತಿಳಿದು ಪಾಲಿಸು.

* ಭಾವೈಕ್ಯತೆ ಇರಲಿ.

* ಮೊಬೈಲ್ ಗೇಮ್ ಗಿಂತ ಮೈದಾನ ಆಟವಾಡು.

* ಹಿರಿಯರ ಅಜ್ಜಿ ಅಜ್ಜನ ಬಳಿ ಕುಳಿತುಕೋ/ಬೆಳಿ.

* ತಂದೆ ತಾಯಿಯ ಹರ್ಷದಿಂದ ಗರ್ವ ಪಡುವ ನಿಟ್ಟಿನಲ್ಲಿ ಸಾಗಲಿ ನಿನ್ನ ಪಯಣ.

* ವ್ಯವಹಾರದಲ್ಲಿ ಶುದ್ಧತೆ ಇರಲಿ.

* ಮಾರ್ಕೆಟಿಂಗ್ ಮಾಹಿತಿ ತಿಳಿದಿರಲಿ.

* ಹಾಡುಗಾರಿಕೆ, ಚಿತ್ರಕಲೆ, ಕ್ಲೆ ಮಾಡ್ಲಿಂಗ್, ಛದ್ಮವೇಷ, ನೃತ್ಯ, ನಾಟಕಭಿನಯ ಎಂಬಿತ್ಯಾದಿ ಸಾಂಸ್ಕೃತಿಕ ರಂಗದಲ್ಲಿ ಭಾಗಿಯಾಗು.

* ರಾಷ್ಟ್ರನಾಯಕರು/ಸಮುದಾಯದ ನಾಯಕರುಗಳ ಬಗ್ಗೆ ಗೌರವ ಇರಲಿ.

* ಭಾಷಣಗಳಿಂದ ಪ್ರೇರಿತನಾಗುವುದಕ್ಕಿಂತ ಪುಸ್ತಕದಿಂದ ಸ್ಪೂರ್ತಿಯಾಗು.

* ಮದ್ಯದ ಮಾತುಗಳನ್ನಾಡದೇ ನಿನ್ನ ಮಾತಿಗೆ ಬೆಲೆ ಇದ್ದಾಗ ಮಾತಾಡು.

* ಮಾತು ಕಡಿಮೆ ಇರಲಿ ಕೃತಿ ಜಾಸ್ತಿರಲಿ.

* ಎಲ್ಲಾ ಭಾಷೆ ಮತ್ತು ಲಿಪಿ ಕಲಿ ಮಾತೃಭಾಷೆ ಬಿಡಬೇಡ.

* ಕೌಶಲ್ಯ ಭರಿತನಾಗಿ ಬೆಳಿ.

* ಬೇಗ ಮಲಗು ಬೇಗಾ ಏಳು.

* ಪೋಷಕರ ಕೆಲಸದಲ್ಲಿ ಭಾಗಿಯಾಗು ಸಹಕರಿಸು.

* ಪೋಷಕರ ಆರ್ಥಿಕ ಸ್ಥಿತಿ ತಿಳಿದು ಹೆಜ್ಜೆ ಹಾಕು.

* ಸಾದನೆ ನಿನ್ನ ಉದ್ದೇಶವಾಗಿರಲಿ.

* ರಾತ್ರಿ ಮಲಗುವಾಗ ದಿನದ ತಪ್ಪುಗಳನ್ನು ಕ್ಷಮೆ ಕೇಳು ಬದಲಾವಣೆವತರುವ ನಿಟ್ಟಿನಲ್ಲಿ ಆಲೋಚಿಸು.

* ಶಾಲಾ/ಕಾಲೇಜಿನಲ್ಲಿ ಹೇಳಿದ ಮನೆಗೆಲಸ ಚಾಚು ತಪ್ಪದೆ ಮಾಡು.

* ಸ್ವಚ್ಚತೆಗೆ ಮಹತ್ವ ನೀಡು.

* ಆತ್ಮಸ್ಥೈರ್ಯ ಬೆಳೆಸಿಕೋ.

* ದಾರ್ಶನಿರು, ಸಂತರು, ಹೋರಾಟಗಾರರು ಮತ್ತು ದೇವಮಾನವರ ಬಗ್ಗೆ ತಿಳಿದು ಹೇಳು.

* ಕೇಳಿಸಿಕೊ, ಬರೆ, ಹೋದು ಮತ್ತು ಹೇಳು ಜಛಶಲ್ಯ ಇರಲಿ

* ಭಾಷಣಕಾರನಾಗು

* ಸಾರ್ವಜನಿಕ ಸ್ಥಳ ಮತ್ತು ವಸ್ತುಗಳನ್ನು ಹಾನಿ ಮಾಡದಿರು.

* ಬಾತ್ ರೂಮ್ ಕವಿತೆ, ಪಾರ್ಕ್ ನಲ್ಲಿನ ಗಿಡ ಮರದ ಮೇಲೆ ಬರೆಯದಿರು.

* ಸರಕಾರದ ಎಲ್ಲಾ ಇಲಾಖೆ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊ.

* ಸಮಾಜ ಸೇವಾ ಭಾವ ಇರಲಿ.

* ಜಗಳದಲ್ಲಿ ಪಾಲು ಬೇಡ.

* ಸಾಕ್ಷಿರೂಪ ಕಾಪಾಡಿಕೊ.

* ಚಲನಚಿತ್ರಗಳ ನಟ/ನಟಿಯರನ್ನು ಅನುಸರಿಸದೇ ರಾಷ್ಟ ಕಟ್ಟಿದ/ಸಾಧನೆ ಮಾಡಿದವರನ್ನು ನೋಡಿ ಕಲಿ.

* ಏನಾದರೂ ಆಗು ಮಾನವನಾಗು.

* ಏನು ಆಗದಿದ್ದರು ಹಾನಿ ಮಾಡದಿರು ಸಾಕು.

* ತಂದೆ ತಾಯಿಗೆ ಒಳ್ಳೆಯ ಮಗ–ಳಾಗು.

* ದೇಶದ ಪ್ರಜೆಯಾಗು.

* ಪ್ರಾಣಿ–ಪಕ್ಷಿಗಳನ್ನು ಗೌರವಿಸು ಪೋಷಿಸು.

* ಹಿಂಸೆ ಮಾಡದಿರು.

* ನಿನ್ನ ಆರೋಗ್ಯ ಮಹಾ ಭಾಗ್ಯ ಕಾಪಾಡಿಕೊ.

* ತೋರ್ಪಡಿಕೆಯೇ ಸಾಧನೆಯಲ್ಲ ಇನ್ನೊಬ್ಬರು ನೀ ಇಲ್ಲದಾಗ ಹೋಗಳುವುದು ಸಾಧನೆ.

* ಸಂತೋಷದಲ್ಲಿದ್ದಾಗ ಮಾತು ಕೊಡಬೇಡ, ದುಃಖದಲ್ಲಿ ನಿರ್ಧಾರ ತೆಗೆದುಕೊಳ್ಳಬೇಡ.

* ಗುರಿ ಮುಟ್ಟುವ ತನಕ ನಿಲ್ಲದಿರು.

* ಹಿರಿಯರ ಮಾರ್ಗದರ್ಶನ ಪಡಿ, ಕಿರಿಯರ ಅಭಿಪ್ರಾಯ ಸ್ವೀಕರಿಸು.

* ಸಾಧಿಸಿದವರ ಜೀವನ ಮತ್ತು ಸಾಧನೆಯ ಚರಿತ್ರೆ ಓದು.

* ಕಾರಾಂತರದಿಂದ ಶಾಲೆ/ಕಾಲೇಜು ಬಿಟ್ಟಾಗ ಏನನ್ನು ಕಲಿಸಿದ್ದಾರೆ ಎಂಬ ಎಲ್ಲಾ ಮಾಹಿತಿ ಪಡೆದುಕೊಂಡು ಸ್ವಂತಿಕೆಯಲ್ಲಿ ಪ್ರಯತ್ನಿಸು.

* ಪ್ರಯತ್ನ ಬಿಡಬೇಡ, ಮರಳಿ ಪ್ರಯತ್ನವ ಮಾಡು.

* ಹುಟ್ಟು ಧರಿದ್ರವಾದರು ಸಾವು ಚರಿತ್ರೆಯಾಗುವ ನಿಟ್ಟಿನಲ್ಲಿ ಸಾಗಲಿ ನಿನ್ನ ಪಯಣ.

* ಬೆಳಿಗ್ಗೆ ಏಳುವಾಗ ದಿನದ ಯೋಜನೆ ರೂಪೊಲಿಸಿಕೊಳ್ಳು.

* ಮಲಗುವಾಗ ಕಲಿತಿರುವ ಶಾಲೆಯ ಎಲ್ಲಾವನ್ನು ಮನನ ಮಾಡು.

* ಕ್ಷಮಿಸುವ ಗುಣ ಬೆಳೆಸಿಕೊ.

* ಕಾರಣ ಹೇಳುತ್ತಾ ಬದುಕಬೇಡ.

* ನಿನ್ನ ಸೋಲಿಗೆ ಯಾರನ್ನು ದೂರಬೇಡ ಬದಲಾಗಿ ಆ ತಪ್ಪು ಆಗದಂತೆ ಎಚ್ಚರ ವಹಿಸು.

* ದೊಡ್ಡ ಅಲೋಚನೆ ಇರಲಿ ಸಣ್ಣತನ ಬೇಡ.

* ಎಲ್ಲಾರನ್ನು ನೋಡಿ ಕಲಿ ಆದರೆ ನಿನ್ನಂತೆ ನೀನಾಗು.

* ನಿನ್ನ ಬ್ಯಾಗ್ ಬುಕ್ ನೀನೆ ಹೊತ್ಕೋ.

* ನಿನ್ನ ಕೆಲಸ ನೀನೆ ಮಾಡು.

* ಮನೆಯ ಹಣದ ಲೆಕ್ಕಚಾರ ನೀನೆ ಮಾಡು.

* ಲಾಭ ನಷ್ಟದ ಬಗ್ಗೆ ಅರಿವಿನಿಂದ ಹೆಜ್ಜೆ ಹಾಕು.

* ನಿನ್ನ ಶಾಲಾ ಕಾಲೇಜಿನ ವಸ್ತುಗಳಿಗೆ ನೀನೆ ಜವಾಬ್ದಾರಿ.

* ಆತ್ಮೀಯ ಗೆಳೆಯ/ತಿಯೊಂದಿಗೆ ನಿನ್ನ ವೈಯಕ್ತಿಕ ವಿಚಾರಗಳನ್ನು ಹಂಚಿಕೊ.

* ನಿನ್ನೊಂದಿಗೆ ನೀ ಸೋಲದಿರು.

## ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

**ಮುಂಬೈ,ಆ.6–** ಸತತ ಮೂರು ಬಡ್ಡಿ ಕಡಿತಗಳ ನಂತರ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಯಥಾಸ್ಥಿತಿಯಲ್ಲಿಡಲು ನಿರ್ಧರಿಸಿದೆ ಮತ್ತು ಶೇ 5.5ರ ರೆಪೊ ದರವನ್ನು ಮುಂದಿನ ಮೂರು ತಿಂಗಳವರೆಗೆ ಮುಂದುವರೆಸಲು ತೀರ್ಮಾನಿಸಿದೆ.

ಸುಂಕದ ಅನಿಶ್ಚಿತತೆಗಳ ಬಗ್ಗೆ ಕಳವಳದಿಂದಾಗಿ ಇಂತಹ ತಟಸ್ಥ ನಿಲುವನ್ನು ಕಾಯ್ದುಕೊಳ್ಳಲಾಗಿದೆ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸುದ್ದಿಗೋಷ್ಠಿಯಲ್ಲಿಂದು ತಿಳಿಸಿದರು.

ಪ್ರಸಕ್ತ ಹಣಕಾಸು ವರ್ಷದ ಮೂರನೇ ದ್ವೈಮಾಸಿಕ ಹಣಕಾಸು ನೀತಿಯನ್ನು ಪ್ರಕಟಿಸಿದ ಅವರು ಹಣಕಾಸು ವರ್ಷ 26 ರ ಬೆಳವಣಿಗೆಯ ದರದ ಮುನ್ಸೂಚನೆಯನ್ನು ಶೇಕಡಾ 6.5 ರಷ್ಟು ಉಳಿಸಿಕೊಳ್ಳಲಾಗಿದೆ ಎಂದು ಹೇಳಿದರು.ಹಣಕಾಸು ನೀತಿ ಸಮಿತಿ (ಎಂಪಿಸಿ) ಅಲ್ಪಾವಧಿಯ ಸಾಲ ದರ ಅಥವಾ ರೆಪೊ ದರವನ್ನು ಶೇಕಡಾ 5.5 ರಷ್ಟು ಯಥಾಸ್ಥಿತಿಯಲ್ಲಿ ಇರಿಸಲು ಸರ್ವಾನುಮತದಿಂದ ನಿರ್ಧರಿಸಿದೆ ಎಂದು ಅವರು ಹೇಳಿದರು.

ಹಣದುಬ್ಬರ ಮುನ್ಸೂಚನೆಗೆ ಸಂಬಂಧಿಸಿದಂತೆ, ಗವರ್ನರ್ ಪ್ರಸ್ತುತ ಹಣಕಾಸು ವರ್ಷಕ್ಕೆ ಹಿಂದಿನ ಅಂದಾಜಿನ 3.7 ಪ್ರತಿಶತದಿಂದ 3.1 ಪ್ರತಿಶತಕ್ಕೆ ಇಳಿಸಿದ್ದಾರೆ.ಫೆಬ್ರವರಿ 2025 ರಿಂದ, ಆರ್‌ಬಿಐ ನೀತಿ ದರವನ್ನು 100 ಬೇಸಿಸ್? ಪಾಯಿಂಟ್‌ಗಳಿಂದ ಕಡಿಮೆ ಮಾಡಿತ್ತು.ಜೂನ್‌ನಲ್ಲಿ ನಡೆದ ಹಿಂದಿನ ನೀತಿ ಪರಿಶೀಲನೆಯಲ್ಲಿ, ಅದು ರೆಪೊ ದರವನ್ನು 50 ಬೇಸಿಸ್ ಪಾಯಿಂಟ್‌ಗಳಿಂದ 5.5 ಪ್ರತಿಶತಕ್ಕೆ ಇಳಿಸಿತ್ತು.ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ಎರಡೂ ಕಡೆಗಳಲ್ಲಿ ಶೇ. 2 ರ ಅಂತರದಲ್ಲಿ ಶೇ. 4 ರಷ್ಟಿದ್ದು, ಎರಡೂ ಕಡೆ ಶೇ. 2 ರ ಅಂತರದಲ್ಲಿ ಉಳಿಯುವಂತೆ ನೋಡಿಕೊಳ್ಳುವ ಕಾರ್ಯವನ್ನು ಸರ್ಕಾರ ಕೇಂದ್ರ ಬ್ಯಾಂಕ್‌ಗೆ ವಹಿಸಿದೆ.

ಮಾನಿಟರಿ ಪಾಲಿಸಿ ಸಮಿತಿ ಶಿಫಾರಸಿನ ಆಧಾರದ ಮೇಲೆ, ಫೆಬ್ರವರಿ ಮತ್ತು ಏಪ್ರಿಲ್‌ನಲ್ಲಿ ರೆಪೊ ದರವನ್ನು ತಲಾ 25 ಬೇಸಿಸ್ ಪಾಯಿಂಟ್‌ಗಳಷ್ಟು ಮತ್ತು ಜೂನ್‌ನಲ್ಲಿ 50 ಬೇಸಿಸ್ ಪಾಯಿಂಟ್‌ಗಳಷ್ಟು ಕಡಿಮೆ ಮಾಡಿತು, ಚಿಲ್ಲರೆ ಹಣದುಬ್ಬರವನ್ನು ಸಡಿಲಿಸುವ ಮೂಲಕ.ಈ ವರ್ಷದ ಫೆಬ್ರವರಿಯಿಂದ ಚಿಲ್ಲರೆ ಹಣದುಬ್ಬರವು ಶೇ. 4 ಕ್ಕಿಂತ ಕಡಿಮೆಯಾಗಿದೆ. ಆಹಾರ ಬೆಲೆಗಳ ಸಡಿಲಿಕೆ ಮತ್ತು ಅನುಕೂಲಕರ ಮೂಲ ಪರಿಣಾಮದಿಂದಾಗಿ ಜೂನ್‌ನಲ್ಲಿ ಆರು ವರ್ಷಗಳ ಕನಿಷ್ಠ ಮಟ್ಟವಾದ 2.1 ಶೇಕಡಾಕ್ಕೆ ಇಳಿದಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಬುಟ್ಟಿಯ ಸುಮಾರು ಅರ್ಧದಷ್ಟು ಪಾಲನ್ನು ಹೊಂದಿರುವ ಆಹಾರ ಹಣದುಬ್ಬರವು ಮೇ ತಿಂಗಳಲ್ಲಿ ಶೇ. 0.99 ರಿಂದ ಜೂನ್‌ನಲ್ಲಿ ಶೇ. 1.06 ಕ್ಕೆ ಇಳಿದಿದೆ. ತರಕಾರಿಗಳು, ಬೇಳೆಕಾಳುಗಳು, ಮಾಂಸ ಮತ್ತು ಮೀನು, ಧಾನ್ಯಗಳು, ಸಕ್ಕರೆ, ಹಾಲು ಮತ್ತು ಮಸಾಲೆಗಳಂತಹ ಪ್ರಮುಖ ವರ್ಗಗಳಲ್ಲಿನ ಕಡಿಮೆ ಬೆಲೆಗಳು ಈ ಕುಸಿತಕ್ಕೆ ಪ್ರಮುಖ ಕಾರಣವಾಗಿವೆ.

ಮಾನಿಟರಿ ಪಾಲಿಸಿ ಸಮಿತಿಯು ಮೂವರು ಅಧಿಕಾರಿಗಳನ್ನು ಒಳಗೊಂಡಿದೆ  ಸಂಜಯ್ ಮಲ್ಹೋತ್ರಾ (ಗವರ್ನರ್), ಪೂನಂ ಗುಪ್ತಾ (ಉಪ ಗವರ್ನರ್) ರಾಜೀವ್ ರಂಜನ್ (ಕಾರ್ಯನಿರ್ವಾಹಕ ನಿರ್ದೇಶಕ) ಮತ್ತು ಮೂವರು ಬಾಹ್ಯ ಸದಸ್ಯರಾಗಿ ನಾಗೇಶ್ ಕುಮಾರ್ (ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು, ಕೈಗಾರಿಕಾ ಅಭಿವೃದ್ಧಿ ಸಂಸ್ಥೆ, ನವದೆಹಲಿ), ಸೌಗತ ಭಟ್ಟಾಚಾರ್ಯ (ಅರ್ಥಶಾಸ್ತ್ರಜ್ಞ), ಮತ್ತು ರಾಮ್ ಸಿಂಗ್ (ನಿರ್ದೇಶಕರು, ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್ ) ಇದ್ದಾರೆ.

## ನಟಿ ರಮ್ಯಾಗೆ ಅಶ್ಲೀಲ ಸಂದೇಶ ಮತ್ತೊಬ್ಬನ ಬಂಧನ

**ಬೆಂಗಳೂರು,ಆ.06–**ಸ್ಯಾಂಡಲ್ ವುಡ್ ನಟಿ ರಮ್ಯಾಗೆ ಅಶ್ಲೀಲ ಸಂದೇಶ ಕಳುಹಿಸಿದ ಪ್ರಕರಣದ ಸಂಬಂಧ ಸಿಸಿಬಿ ಪೊಲೀಸರು ಮತ್ತೋರ್ವ ಆರೋಪಿಯನ್ನು ಬಂಧಿಸಿದ್ದಾರೆ.



ಕೊಪ್ಪಳ ಮೂಲದ ಮಂಜುನಾಥ ಬಂಧಿತ ಆರೋಪಿಯಾಗಿದ್ದಾನೆ, ಇದುವರೆಗೆ ಅಶ್ಲೀಲ ಕಮೆಂಟ್ ಮಾಡಿದ ಐದು ಆರೋಪಿಗಳನ್ನು ಈವರೆಗೆ ಬಂಧಿಸಲಾಗಿದೆ.

ಬಂಧಿತರನ್ನು ರಾಜೇಶ್, ಓಬಣ್ಣ, ಗಂಗಾಧರ್, ಭುವನ್ ಎಂದು ಗುರುತಿಸಲಾಗಿದೆ. ಸಿಸಿಬಿ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ್ದು, ಕಮೆಂಟ್ ಮಾಡಿದ ಪ್ರತಿಯೊಬ್ಬರ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ.

ನಟಿ ರಮ್ಯಾ ಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದ 48 ಜನರ ಐಪಿ ವಿಳಾಸಗಳನ್ನು ಗಳನ್ನು ಸಿಸಿಬಿ ಪೊಲೀಸರು ಪತ್ತೆಹಚ್ಚಿದ್ದಾರೆ ಇದುವರೆಗೂ ಒಟ್ಟು 15 ಜನರನ್ನು ಗುರುತಿಸಿದ್ದು, ಐವರನ್ನು ಸಿಸಿಬಿ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಚಿಕ್ಕಮಗಳೂರು, ಕೋಲಾರ, ಭಾಗದವರೇ ಹೆಚ್ಚು ಅಶ್ಲೀಲವಾಗಿ ಮೆಸೇಜ್ ಮಾಡಿದ್ದಾರೆ ಎಂದು ಹೇಳಲಾಗಿದೆ. ಸಾಮಾನ್ಯವಾಗಿ ಕಮೆಂಟ್ ಮಾಡಿದವರಿಗೆ ಕರೆಸಿ ವಾರ್ನಿಂಗ್ ಕೊಡಲಾಗುತ್ತಿದೆ. ಉಳಿದ ಕೆಲವರು ಐಪಿ ವಿಳಾಸ ಬ್ಲಾಕ್ ಮಾಡಿಕೊಂಡು ಮನೆ ಬಿಟ್ಟು ಪರಾರಿಯಾಗಿದ್ದಾರೆ.

ನಾರ್ಮಲ್ ಆಗಿ ಕಮೆಂಟ್ ಮಾಡಿದವರು ಈ ಬಗ್ಗೆ ಕ್ಷಮೆ ಕೇಳಿದ್ದಾರೆ. ಅರಿವಿಲ್ಲದೆ ಮೆಸೇಜ್ ಮಾಡಿದರೆ ಬಗ್ಗೆ ಕೆಲವರು ಕ್ಷಮೆ ಕೇಳಿದ್ದಾರೆ.

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ರೇಣುಕಾಸ್ವಾಮಿ ಕುಟುಂಬದ ಪರವಾಗಿ ನಿಂತ ಕಾರಣಕ್ಕೆ ನಟಿ ರಮ್ಯಾಗೆ ದರ್ಶನ್ ಅಭಿಮಾನಿಗಳು ಅಶ್ಲೀಲ ಮೆಸೇಜ್ ಕಳುಹಿಸಿದ್ದರು.

ಇದರ ಬೆನ್ನಲ್ಲೇ ದರ್ಶನ್ ಫ್ಯಾನ್ಸ್ ವಿರುದ್ಧ ಗರಂ ಆದ ನಟಿ ಅಶ್ಲೀಲ ಮೆಸೇಜ್ ಕಳುಹಿಸಿದ್ದವರ ಖಾತೆಗಳನ್ನು ಬಹಿರಂಗಗೊಳಿಸಿದ್ದರು. ಜೊತೆಗೆ 43 ಅಕೌಂಟ್‌ಗಳ ವಿರುದ್ಧ ದೂರು ದಾಖಲಿಸಿದ್ದರು.

ಯುವ ಮಾರ್ಗ



## ಅರಕೇರಾ ತಹಶೀಲ್ದಾರ ಅಮರೇಶ ಬೀರಾದಾರರಿಗೆ ಜಿಲ್ಲಾಧಿಕಾರಿಗಳಿಂದ ಪ್ರಶಂಸನಾ ಪತ್ರ.



**ಯುವ ಮಾರ್ಗ ಸುದ್ದಿ**

**ಅರಕೇರಾ,ಆ.6–** ಪಟ್ಟಣದಲ್ಲಿನ ಅಟಲ್‌ಜೀ ಜನಸ್ನೇಹಿ ಕೇಂದ್ರದ ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲೆಯ ಸಾರ್ವಜನಿಕರಿಗೆ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಪ್ರಮಾಣ ಪತ್ರಗಳ ಸೇವೆಯನ್ನು ನೀಡಲು ಅರಕೇರಾ ತಾಲೂಕಿನ ಅರಕೇರಾ ನಾಡಕಛೇರಿಯಲ್ಲಿ .ಜುಲೈ 2025ರ ಮಾಹೆಯಲ್ಲಿ.ಸ್ವೀಕರಿಸಲಾಗಿರುವ ಅರ್ಜಿಗಳನ್ನು ನಿಗದಿತ ಅವಧಿಯೊಳಗಾಗಿ ವಿಲೇವಾರಿ ಮಾಡಿ ವಿಲೇವಾರಿ ಮಾಡಿದ ಪ್ರಯುಕ್ತ ರಾಯಚೂರು ಜಿಲ್ಲಾಧಿಕಾರಿಗಳಾದ ನೀತಿಶ್ ಕೆ ಅವರು ಪ್ರಗತಿ ಸಾಧನೆಗಾಗಿ ಅರಕೇರಾ ತಹಶೀಲ್ದಾರ ಅಮರೇಶ ಬೀರಾಧಾರರಿಗೆ ಪ್ರಶಂಸನಾ ಪತ್ರವನ್ನು ನೀಡಿದ್ದಾರೆ.

ಸೂಚ್ಯಂಕದ ಪ್ರಕಾರ ಅರಕೇರಾ ನಾಡಕಛೇರಿಯು ಕ್ರಮವಾಗಿ ರಾಜ್ಯಮಟ್ಟದಲ್ಲಿ ತೃತಿಯ ಸ್ಥಾನವನ್ನು ಹಾಗೂ ಜಿಲ್ಲೆಯಲ್ಲಿ ದ್ವೀತಿಯಸ್ಥಾನ ಪಡೆದಿರುವುದು ಶ್ಲಾಘನೀಯ ಹಾಗೂ ರಾಯಚೂರು ಜಿಲ್ಲೆಯ ರಾಜ್ಯಮಟ್ಟದಲ್ಲಿ ತೃತಿಯಸ್ಥಾನ ಪಡೆಯಲು ಕಾರಣ ?ಕರ್ತರಾಗಿರುತ್ತೀರಿ.

ನಿಮ್ಮ ನಾಡಕಚೇರಿಯ ಈ ಕಾರ್ಯ ಸಾಧನೆಗೆ ನಿಮ್ಮ ಹಾಗೂ ನಿಮ್ಮ ನಾಡಡಕಛೇರಿ ಅಟಲ್ ಜೀ ಜನಸ್ನೇಹಿ ಕೇಂದ್ರದ ಉಪತಹಶೀಲ್ದಾರ ಮತ್ತು ಸಿಬ್ಬಂದಿಗಳು,ಗ್ರಾಮಲೆಕ್ಕಾಧಿಕಾರಿಗಳು ಸಹಕಾರ ಕಾರ್ಯತತ್ಪರತೆ ಕಾರಣವಾಗಿರುತ್ತದೆ.ಆದ್ದರಿಂದ ಜಿಲ್ಲಾಧಿಕಾರಿಗಳು ಪ್ರಶಂಸನಾ ಪತ್ರ ನೀಡಿದ್ದಾರೆ.

## ಆಗಸ್ಟ್ 16ರಂದು ಜಿಲ್ಲಾಡಳಿತದಿಂದ ಶ್ರೀಕೃಷ್ಣ ಜಯಂತಿ

**ರಾಯಚೂರು,ಆ.06–**ಇಲ್ಲಿಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಗಸ್ಟ್ 16ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಶ್ರೀಕೃಷ್ಣ ಜಯಂತಿ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ರಾಯಚೂರು ಮಹಾನಗರ ಪಾಲಿಕೆಯ ಪ್ರಭಾರ ಅಧ್ಯಕ್ಷರಾದ ಸಾಜೀದ್ ಸಮೀರ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಆಯುಕ್ತರಾದ ಜಹೀರಾ ನಸೀಮ್, ಯಾದವ್ ಸಮಾಜದ ಜಿಲ್ಲಾಧ್ಯಕ್ಷರಾದ ಕೆ.ಹನುಮಂತಪ್ಪ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್‌ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.ನಿವೃತ ಉಪನ್ಯಾಸಕರಾದ ಬಿ.ಜಿ.ಹುಲಿ ಅವರು ಶ್ರೀಕೃಷ್ಣ ಜಯಂತಿ ಕುರಿತು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗ್ನಿವೀರ ಸೇನಾ ನೇಮಕಾತಿ ರ್‍ಯಾಲಿ: ವಸತಿ ವ್ಯವಸ್ಥೆಗೆ ಸ್ಥಾನಿಕ ವೀಕ್ಷಕರ ನೇಮಕ

**ರಾಯಚೂರ,ಆ.06–** ಇಲ್ಲಿನ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಆಗಸ್ಟ್ 08ರಿಂದ ಆಗಸ್ಟ್ 26ರವರೆಗೆ ನಡೆಯುವ ಅಗ್ನಿವೀರ್ ಸೇನಾ ರ್‍ಯಾಲಿಗೆ ಸ್ಥಾನಿಕ ವೀಕ್ಷಕರನ್ನು ನೇಮಿಸಲಾಗಿದೆ.

ಈ ಸೇನಾ ನೇಮಕಾತಿ ರ್‍ಯಾಲಿಯಲ್ಲಿ ಭಾಗವಹಿಸುವ ರಾಜ್ಯದ ವಿವಿಧ ಜಿಲ್ಲೆಯ ಅಭ್ಯರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸೂಚನೆ ನೀಡಿದ್ದರಿಂದಾಗಿ ಈ ಅಭ್ಯರ್ಥಿಗಳಿಗೆ ಸಂತೋಷ ಹಬ್‌ನಲ್ಲಿ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ.

ಗಾಂಧೀ ವೃತ್ತದಲ್ಲಿರುವ ಸಂತೋಷ ಹಬ್‌ನಲ್ಲಿ ಅಭ್ಯರ್ಥಿ ಗಳಿಗೆ ವಸತಿ ವ್ಯವಸ್ಥೆಯನ್ನು ಒದಗಿಸಿದ ಬಗ್ಗೆ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಮತ್ತು ಸಾರಿಗೆ ಇಲಾಖೆ ಇವರೊಂದಿಗೆ ಸಮನ್ವಯ ಸಾಧಿಸಿ ಅಭ್ಯರ್ಥಿ ಗಳಿಗೆ ಮಾರ್ಗದರ್ಶನ ನೀಡಲು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ತಮ್ಮ ಇಲಾಖೆಯ ವಿವಿಧ ವಸತಿ ನಿಲಯಗಳ ನಿಲಯಪಾಲಕರಿಗೆ ಸ್ಥಾನಿಕ ವೀಕ್ಷಕರನ್ನಾಗಿ ನೇಮಿಸಿದ್ದಾರೆ.

**ಸ್ಥಾನಿಕ ವೀಕ್ಷಕರ ವಿವರ:** ಆಗಸ್ಟ್ 7 ರಿಂದ 8ರವರೆಗೆ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ (ಉನ್ನತ್ತೀಕರಿಸಿದ) ಬಾಲಕರ ವಸತಿ ನಿಲಯದ ನಿಲಯಪಾಲಕರಾದ ಶಾಮಣ್ಣ ದೂರವಾಣಿ ಸಂಖ್ಯೆ: 9741199211, ಆಗಸ್ಟ್ 10 ರಿಂದ 12ರವರೆಗೆ ರಾಯಚೂರಿನ ಜಹೀರಾಬಾದ್ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ನಿಲಯಪಾಲಕರಾದ ರವಿ ಮೊಬೈಲ್ ಸಂಖ್ಯೆ: 9845763768, ಆಗಸ್ಟ್ 13 ರಿಂದ 15ವರೆಗೆ ಬೋಳಮಾನದೊಡ್ಡಿ ರಸ್ತೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿಲಯಪಾಲಕರಾದ ರೇವಣ್ಣ ಸಿದ್ದಪ್ಪ ಮೊಬೈಲ್ ಸಂಖ್ಯೆ 8904118926, ಆಗಸ್ಟ್ 16ರಿಂದ 18ವರೆಗೆ ರಾಯಚೂರಿನ ಡಾ.ಎಪಿಜೆ ಅಬ್ದುಲ್ ವಸತಿ ಶಾಲೆಯ ನಿಲಯಪಾಲಕರಾದ ಆದೇಶ ಮೊಬೈಲ್ ಸಂಖ್ಯೆ: 9964757896, ಆಗಸ್ಟ್ 19ರಿಂದ 21ವರೆಗೆ ಗಿಲ್ಲೇಸೂಗೂರು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿಲಯಪಾಲಕರಾದ ವಿಶ್ವನಾಥ ಮೊಬೈಲ್ ಸಂಖ್ಯೆ: 9916679390, ಆಗಸ್ಟ್ 22ರಿಂದ 23ವರೆಗೆ ಯರಮರಸ್ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನಿಲಯಪಾಲಕರಾದ ಗಂಗಣ್ಣ ಮೊಬೈಲ್ ಸಂಖ್ಯೆ: 9900494048, ಆಗಸ್ಟ್ 24ರಿಂದ 25ವರೆಗೆ ಸಿಂಧನೂರಿನ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ನಿಲಯಪಾಲಕರಾದ ಚನ್ನರೆಡ್ಡಿ ಮೊಬೈಲ್ ಸಂಖ್ಯೆ: 9108296944, ಆಗಸ್ಟ್ 26ರಂದು ಮಾನವಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹೆಚ್ಚುವರಿ ನಿಲಯಪಾಲಕರಾದ ರಮೇಶ ಮೊಬೈಲ್ ಸಂಖ್ಯೆ: 9632779401 ಇವರು ಸ್ಥಾನಿಕ ವೀಕ್ಷಕರಾಗಿದ್ದಾರೆ.

ಈ ಸಿಬ್ಬಂದಿಯು ಸೂಚಿಸಿದ ದಿನಾಂಕದಂದು ಜಿಲ್ಲಾ ಕಚೇರಿಯಿಂದ ರಜಿಸ್ಟರ್ ಪಡೆದು ಅಭ್ಯರ್ಥಿಗಳ ನೋಂದಣಿ ಕಾರ್ಯ ಮಾಡಬೇಕು. ಈ ಕುರಿತು ಒಂದು ಕೌಂಟರ್ ಸ್ಥಳ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವ ಸ್ತನ್ಯಪಾನ ಸಪ್ತಾಹ ಆಚರಣೆಯ ಮಹತ್ವ ತಿಳಿಯಿರಿ:ಡಾ.ಶಿವಶಂಕರ ಬಿ.

**ಬೀದರ, ಆ.06–**ದೇಶಾದ್ಯಂತ ಸ್ತನ್ಯಪಾನದ ಮಹತ್ವವನ್ನು ತಿಳಿಸಲು ಹಾಗೂ ಶಿಶುಗಳ ಮತ್ತು ತಾಯಂದಿರ ಆರೋಗ್ಯ ಸುಧಾರಣೆಗಾಗಿ ಸ್ತನ್ಯಪಾನವನ್ನು ಮುಂದುವರೆಸಲು, ಉತ್ತೇಜಿಸಲು ಮತ್ತು ಬೆಂಬಲಿಸಲು ಆಗಸ್ಟ್.1 ರಿಂದ 7 ರವರೆಗೆ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಿಸಲಾಗುತ್ತಿದೆ ಎಂದು ಬೀದರ ಆರ್.ಸಿ.ಹೆಚ್ ಅಧಿಕಾರಿ ಡಾ.ಶಿವಶಂಕರ ಬಿ. ಅವರು ತಿಳಿಸಿದರು.



ಅವರು ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ ನೂರು ಹಾಸಿಗೆ ಆಸ್ಪತ್ರೆ ಬೀದರನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಸ್ತನ್ಯಪಾನ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿಯ ಹಾಲು ನೀಡುವುದರಲ್ಲಿ ಹೂಡಿಕೆ ಮಾಡಿದರೆ ಮಕ್ಕಳ ಆರೋಗ್ಯಕರ ಭವಿಷ್ಯಕ್ಕಾಗಿ ಹೂಡಿಕೆ ಮಾಡಿದಂತೆ ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ವಿಶ್ವ ಸ್ತನ್ಯಪಾನ ಸಪ್ತಾಹ" ಎಂಬ ಈ ವರ್ಷದ ಘೋಷವಾಕ್ಯದೊಂದಿಗೆ ಎಲ್ಲೆಡೆ ಜಾಗತಿಕ ಅಭಿಯಾನವಾಗಿ ಆಚರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬೀದರ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ ನೂರು ಹಾಸಿಗೆ ಆಸ್ಪತ್ರೆಯ ಸ್ತ್ರೀರೋಗ ತಜ್ಞರಾದ ಡಾ.ಸರೋಜ ಪಾಟೀಲ ಮಾತನಾಡಿ, ಜಿಲ್ಲೆಯ ಎಲ್ಲಾ ಆರೋಗ್ಯ ಸಂಸ್ಥೆಯ ಅಂದರೆ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಎಸ್.ಎನ್.ಸಿ.ಯು, ಎಸ್.ಬಿ.ಎಸ್.ಯು, ಎನ್.ಆರ್.ಸಿ, ಪಿ.ಎನ್.ಸಿ.ಯು, ಮಕ್ಕಳ ವಾರ್ಡ್ ಕಾರ್ಯತಂತ್ರದ ಸ್ಥಳಗಳಲ್ಲಿ ವಿಶೇಷವಾಗಿ ಸ್ತನ್ಯಪಾನಕ್ಕಾಗಿ ಒಂದು ಕೊಠಡಿ ಮೀಸಲಿದೆ ಎಂದರು.

ಬೀದರ ತಾಯಿ ಮತ್ತು ಮಕ್ಕಳ ಆರೈಕೆ ಕೇಂದ್ರ ನೂರು ಹಾಸಿಗೆ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ.ವರ್ಷಾ ತೊಂಡಾರೆ ಅವರು ಮಾತನಾಡಿ, ಮಗು ಜನಿಸಿದ ಒಂದು ಗಂಟೆಯೊಳಗೆ ಸ್ತನ್ಯಪಾನ ಮಾಡಿಸುವುದು ಕೊಲೊಸ್ಟ್ರೋಮ್ ಸೇವನೆಯ ಪ್ರಾಮುಖ್ಯತೆ ಹಾಗೂ ಮೊದಲ ಆರು ತಿಂಗಳ ವರೆಗೆ ಕಡ್ಡಾಯ ಸ್ತನ್ಯಪಾನ ಮಾಡುವುದರಿಂದ ಆರಂಭಿಕ ಬಾಲ್ಯದ ಬೆಳವಣಿಗೆ ಹೆಚ್ಚಿಸಲು ಮತ್ತು ಪೌಷ್ಟಿಕಾಂಶವನ್ನು ಸುಧಾರಿಸಲು ಹಾಗೂ ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸ್ತನ್ಯಪಾನ ಮಾಡಿಸುವುದು ಬಹಳ ಮುಖ್ಯವಾಗಿರುತ್ತದೆ. ಎಲ್ಲರೂ ಎಚ್ಚೆತ್ತುಕೊಂಡು ಎದೆಹಾಲಿನ ಮಹತ್ವದ ಬಗ್ಗೆ ಅರಿತುಕೊಂಡು ಎಲ್ಲಾ ತಾಯಂದಿರು ಹಾಗೂ ಗರ್ಭಿಣಿಯರು ಕನಿಷ್ಟ ಎರಡು ವರ್ಷದ ವರೆಗೆ ಸ್ತನ್ಯಪಾನ ಮಾಡಿಸುವಂತೆ ತಿಳಿಸಿದರು.

ಜಿಲ್ಲಾ ಕಾರ್ಯಕ್ರಮ ಸಂಯೋಜಕ ಶಿವಶಂಕರ ಬೇಮಳಗಿ ಮಾತನಾಡಿ, ಸಪ್ತಾಹದ ಬಗ್ಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ಆರೋಗ್ಯ ಸಂಸ್ಥೆಗಳ ಉಪಕೇಂದ್ರಗಳ ಗುಂಪು ಸಭೆಗಳಲ್ಲಿ, ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಪೌಷ್ಠಿಕ ಸಮಿತಿ ಸಭೆಯಲ್ಲಿ ಸಭೆಗಳಲ್ಲಿ ಸ್ತನ್ಯಪಾನದ ಮಹತ್ವದ ಬಗ್ಗೆ ತಾಯಂದಿರು ಹಾಗೂ ಗರ್ಭಿಣಿಯರು ಮಾಹಿತಿಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಾರ್ವಜನಿಕರಲ್ಲಿ ವಿನಂತಿಸಿದರು ಹಾಗೂ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಎದೆಹಾಲಿನ ಮಹತ್ವ ಕುರಿತು ಅರಿವು ಮೂಡಿಸಲಾಗುವುದು ಎಂಧು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಡಾ. ಗೌಸ್ ಪಾಶಾ ಮಕ್ಕಳ ತಜ್ಞರು, ಡಾ. ಪ್ರೀತಿ ಬಿರಾದರ ಸ್ತ್ರೀರೋಗ ತಜ್ಞರು,. ಭಾಗ್ಯಲಕ್ಷ್ಮಿ?? ಪ್ರ.ಡಿ.ಎನ್.ಓ., ಸಂಗೀತಾ ಡಿ.ಸಿ.ಎಂ, ರವಿ. ಡಿ.ಡಿ.ಎಂ, ಅನಿತಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಬಡವರಲ್ಲಿ ಪ್ರಾಮಾಣಿಕತೆ ಹೆಚ್ಚು:ಅಬ್ದುಲ್ ಜಬ್ಬಾರ್ ಸಿದ್ದಿಕಿ




**ಬೀದರ್:ಅ.06–** ಬಡ ಜನರಲ್ಲಿ ಪ್ರಾಮಾಣಿಕತೆ ಹೆಚ್ಚಿರುತ್ತದೆ ಎಂದು ಸಹುಲತ್ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಅಬ್ದುಲ್ ಜಬ್ಬಾರ್ ಸಿದ್ದಿಕಿ ಹೇಳಿದರು.

ಬೀದರ್ ಕಾರುಣ್ಯ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವತಿಯಿಂದ ನಗರದ ಮೊಘಲ್ ಗಾರ್ಡನ್ ಸಭಾಂಗಣದಲ್ಲಿ ಈಚೆಗೆ ಆಯೋಜಿಸಿದ್ದ ಸಮುದಾಯ ಸಂಪರ್ಕ, ಮಿಷನ್ ಮತ್ತು ವಿಜನ್ ಕುರಿತ ಸಭೆಯಲ್ಲಿ ಅವರು ಮಾತನಾಡಿದರು.ಬೀದರ್ ಕಾರುಣ್ಯ ಸಹಕಾರಿ ಸಂಸ್ಥೆಯ ಬಡವರು ಹಾಗೂ ಸಣ್ಣ ವ್ಯಾಪಾರಿಗಳ ಸಾಲ ಮರು ಪಾವತಿ ಪ್ರಮಾಣ ಶೇಕಡ 98 ರಷ್ಟಿದೆ ಎಂದು ತಿಳಿಸಿದರು.ದೇಶದಲ್ಲಿ ಬಡ್ಡಿ ರಹಿತ ಸಹಕಾರ ಸಂಘಗಳು 14 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿವೆ. ಒಟ್ಟು 47 ಶಾಖೆಗಳಿದ್ದು, 1.25 ಲಕ್ಷ ಕುಟುಂಬಗಳು ಈ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿವೆ. ಪ್ರತಿ ನಿತ್ಯ ಈ ಸಂಸ್ಥೆಗಳು ಸುಮಾರು ರೂ. 1.5 ಕೋಟಿಯಷ್ಟು ಸಾಲ ನೀಡುತ್ತಿವೆ ಎಂದು ಹೇಳಿದರು.ಬಡವರ ಹೆಚ್ಚಿನ ಆದಾಯದ ಪ್ರಮಾಣ ಇತರ ಬ್ಯಾಂಕ್‌ಗಳಿಗೆ ಬಡ್ಡಿ ರೂಪದಲ್ಲಿ ಹೋಗುತ್ತದೆ. ಆದರೆ, ನಮ್ಮ ಸಹಕಾರಿ ಸಂಘಗಳು ಬಡವರಿಗೆ ಬಡ್ಡಿ ರಹಿತವಾಗಿ ಸಾಲ ನೀಡುತ್ತಿವೆ ಎಂದು ತಿಳಿಸಿದರು.ಪೌರಾಡಳಿತ ಸಚಿವ ರಹೀಂ ಖಾನ್ ಮಾತನಾಡಿ, ಬೀದರ್ ಕಾರುಣ್ಯ ಸಂಘವು ಕಡಿಮೆ ಅವಧಿಯಲ್ಲೇ ಅಭಿವೃದ್ಧಿ ಸಾಧಿಸಿರುವುದು ಆಶ್ಚರ್ಯ ಹಾಗೂ ಸಂತಸ ಉಂಟು ಮಾಡಿದೆ ಎಂದು ಹೇಳಿದರು.ಸಂಘ ಬಡವರು ಹಾಗೂ ಸಣ್ಣ ವ್ಯಾಪಾರಿಗಳ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತಿದೆ ಎಂದು ತಿಳಿಸಿದರು.ಸಂಘದ ವ್ಯವಸ್ಥಾಪಕ ಮಂಡಳಿ ಅಧ್ಯಕ್ಷ ಮುಜ್ತಬಾ ಖಾನ್ ಮಾತನಾಡಿ, ಸಂಘವು 7 ವರ್ಷಗಳ ಅವಧಿಯಲ್ಲಿ ಸಣ್ಣ ವ್ಯಾಪಾರಿಗಳಿಗೆ 60 ಕೋಟಿ ಹಾಗೂ ರೂ. 40 ಲಕ್ಷ ವೈಯಕ್ತಿಕ ಸಾಲ ವಿತರಿಸಿದೆ ಎಂದು ಹೇಳಿದರು.

3,500 ಕುಟುಂಬಗಳು ಸಂಘದೊಂದಿಗೆ ಜೋಡಣೆ ಆಗಿವೆ ಎಂದು ತಿಳಿಸಿದರು.

## ಡಿ.ದೇವರಾಜು ಅರಸು ಜಯಂತಿ: ಆ.7ರಂದು ಪೂರ್ವಭಾವಿ ಸಭೆ

**ರಾಯಚೂರು.ಆ.06–** ಇಲ್ಲಿನ ಜಿಲ್ಲಾಡಳಿತದ ವತಿಯಿಂದ ಆಗಸ್ಟ್ 20 ರಂದು ಕರ್ನಾಟಕ ಮಾಜಿ ಮುಖ್ಯಮಂತ್ರಿ ಡಿ.ದೇವರಾಜು ಅರಸು ಅವರ 110ನೇ ಜಯಂತಿ ನಡೆಯಲಿದೆ.

ಈ ಜಯಂತಿ ಅಂಗವಾಗಿ ಆಗಸ್ಟ್ 7ರ ಬೆಳಿಗ್ಗೆ 11.30 ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ವಿವಿಧ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಬಹುದಾಗಿದೆ.

ಅಂದು ನಡೆಯುವ ಪೂರ್ವಭಾವಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಸಮಾಜದ ಮುಖಂಡರುಗಳು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಅರ್ಜಿ ಆಹ್ವಾನ

**ರಾಯಚೂರು,ಆ.06–** ರಾಯಚೂರು ಮಹಾನಗರ ಪಾಲಿಕೆಯಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಉಪ ಘಟಕವಾದ ಎ.ಎಚ್.ಪಿ ಯೋಜನೆಯಡಿ 2,419 ಗುಂಪು ಮನೆಗಳು ಜಿ+3 ಮಾದಿಯಲ್ಲಿ ನಿರ್ಮಾಣವಾಗುತ್ತಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ವಸತಿ ಮತ್ತು ನಿವೇಶನ ರಹಿತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಉಪ ಘಟಕವಾದ ಎ.ಎಚ್.ಪಿ ಯೋಜನೆಯಡಿ ಪಾಲಿಕೆ ವ್ಯಾಪ್ತಿಯಲ್ಲಿ 2,419 ಗುಂಪು ಮನೆಗಳು ಜಿ+3 ಮಾದಿಯಲ್ಲಿ ನಿರ್ಮಾಣವಾಗುತ್ತಿದು, ಈಗಾಗಲೆ ಕಚೇರಿಗೆ ಸ್ವೀಕೃತವಾದ ಅರ್ಜಿಗಳನ್ನು ಆಯ್ಕೆಮಾಡಿದ್ದು, ವಸತಿ ಮತ್ತು ನಿವೇಶನ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರಿಂದ ಅತಿ ಕಡಿಮೆ ಅರ್ಜಿಗಳು ಸ್ವೀಕೃತವಾಗಿವೆ. ಈ ವರ್ಗದ ಫಲಾನುಭವಿಗಳ ಆಯ್ಕೆ ಬಾಕಿಯಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಅರ್ಹ ಫಲಾನುಭವಿಗಳು ಆಗಸ್ಟ್ 20ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರು, ಹಾಗೂ ನಗರ ಆಶ್ರಯ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನರ ಕಲ್ಯಾಣ ಕಾರ್ಯಕ್ರಮಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಆ.06–**ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2019–20, 2021–22, 2023–24 ಹಾಗೂ 2024–25ನೇ ಸಾಲಿನ ಎಸ್.ಎಫ್.ಸಿ ನಿಧಿ ಹಾಗೂ ನಗರಸಭೆ ನಿಧಿಯ ಶೇ.5ರ ಪರಿಷ್ಕೃತ ಕ್ರಿಯಾ ಯೋಜನೆಯಡಿ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಶೇ.5ರ ಯೋಜನೆಯಡಿ ಪರಿಶಿಷ್ಟ ಜಾತಿಯ ವಿಕಲಚೇತನರ ಮನೆಯ ಮೇಲ್ಚಾವಣೆ ದುರಸ್ತಿ ಸಾಮಗ್ರಿಗಳು ಅಥವಾ ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು ಅವಶ್ಯಕತೆನುಗುಣವಾಗಿ ಒಂದು ಬಾರಿ 40,000 ರೂ.ಗಳ ಧನಸಹಾಯ ನೀಡಲಾಗುವುದು.

ವೈಯಕ್ತಿಕ ಸೌಲಭ್ಯಕ್ಕಾಗಿ 2019–20ನೇ ಸಾಲಿನ ಜೀವ ವಿಮಾ ಹಾಗೂ ಆರೋಗ್ಯ ಯೋಜನೆಯ ವಾರ್ಷಿಕ ಪ್ರೀಮಿಯಂ ಕಂತುಗಳನ್ನು ವಿಕಲಚೇತನರ ಜನರಿಗೆ ವಿಮೆಯನ್ನು ಮಾಡಿಸಿ ಅಥವಾ ನವೀಕರಿಸಿ ವಿಮಾ ಮೊತ್ತವನ್ನು ಪಾವತಿಸಲಾಗುತ್ತಿದೆ.

ದಾಖಲಾತಿಗಳು: ನಿಗದಿತ ನಮೂನೆಯಲ್ಲಿ ಅರ್ಜಿ, ದೃಢೀಕೃತ ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಪ್ರಸಕ್ತ ಚಾಲ್ತಿ ಸಾಲು), ದೃಢೀಕೃತ ವಾಸಸ್ಥಳಕ್ಕೆ ಗುರುತಿನ ಚೀಟಿ ಅಥವಾ ರೇಷನ್ ಕಾರ್ಡ್, ಪಾಸ್ ಪೋಟೋ ಅಳತೆಯ ಭಾವ ಚಿತ್ರ–2, ಬ್ಯಾಂಕ್ ಪಾಸ್ ಪುಸ್ತಕ್ ಹಾಗು ಐ.ಎಫ್.ಎಸ್.ಸಿ ಕೋಡ್‌ನೊಂದಿಗೆ ಬ್ಯಾಂಕ್ ವಿವರ, ವೈದ್ಯರಿಂದ ಪಡೆದ ಗುರುತಿನ ಚೀಟಿ ಹಾಗೂ ಯು.ಡಿ.ಎ. ಕಾರ್ಡ್, ಮನೆಯ ಮೇಲ್ಚಾವಣೆ ಛಾಯಾ ಚಿತ್ರ. ಅಥವಾ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಜಾಗದ ಛಾಯಾಚಿತ್ರ, ಮೊಬೈಲ್ ನಂಬರ್‌ನೊಂದಿಗೆ ಆಗಸ್ಟ್ 13ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅವದಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸರಿಯಾದ ದಾಖಲಾತಿಗಳು ಸಲ್ಲಿಸದೇ ಇದ್ದ ಪಕ್ಷದಲ್ಲಿ ತಮಗೆ ಯಾವುದೇ ಹಿಂಬರಹ ಕಳುಹಿಸದೇ ನೇರವಾಗಿ ವಿಭಾಗದ ಸಿಬ್ಬಂದಿಯವರು ತಿರಸ್ಕೃತ ಮಾಡಲಾಗುವುದೆಂದು ಪಾಲಿಕೆಯ ಆಡಳಿತ ವಿಭಾಗದ ಕಚೇರಿ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಟಕಾ: ಬಂಧನ

**ಕಲಬುರಗಿ,ಆ.06–**ನಗರದ ತಿಮ್ಮಾಪೂರ್ ಸರ್ಕಲ್ ಹತ್ತಿರ ಮಟಕಾ ನಂಬರ್ ಬರೆದುಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಎಎಸ್‌ಐ ತಿಮ್ಮಪ್ಪ, ಅಪರಾಧ ವಿಭಾಗದ ಸಿಬ್ಬಂದಿಗಳು ದಾಳಿ ನಡೆಸಿ ಬ್ರಹ್ಮಪುರ ಬಡಾವಣೆಯ ರೋಕಡಾ ಹನುಮಾನ ಮಂದಿರ ಏರಿಯಾ ನಿವಾಸಿ ರಾಜು ತಂದೆ ಬಸವರಾಜ ಹೂಗಾರ (42) ಎಂಬಾತನನ್ನು ಬಂಧಿಸಿ 1150 ರೂ.ನಗದು, ಎರಡು ಮಟಕಾ ಚೀಟಿ ಮತ್ತು ಒಂದು ಬಾಲ್‌ಪೆನ್ ಜಪ್ತಿ ಮಾಡಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H